ಸಂಪುಟ : 8 ಸಂಚಿಕೆ 311 ಪುಟ : 4 ಬೆಲೆ : 3.00 ಬುಧವಾರ ಜನವರಿ 24, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 311 Pages : 4 Price : 3.00 Wednesday JANUARY 24, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ರಾಜ್ಯ ಮಟ್ಟದ ಪ್ರಶಸ್ತಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಅಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಮತದಾರರ ದಿನವನ್ನು ಪ್ರತಿ ವರ್ಷ ಜನವರಿ 25ರಂದು ಆಚರಿಸಲಾಗುತ್ತಿದೆ. ಪ್ರಸಕ್ತ ವರ್ಷ 'ಮತದಾನಕ್ಕಿಂತ ಇನ್ನೊಂದಿಲ್ಲ. ನಾನೂ ಖಚಿತವಾಗಿ ಮತದಾನ ಮಾಡುವೆ' ಎಂಬ ವಿಶೇಷ ಧ್ಯೇಯವಾಕ್ಯದೊಂದಿಗೆ 14ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮವನ್ನು ಜನವರಿ 25, 2024ರಂದು ಆಚರಿಸಲು ಚುನಾವಣಾ ಆಯೋಗವು ನಿರ್ಧಾರ ಮಾಡಿದೆ.

ಚುನಾವಣಾ ಸಂಬಂಧಿತ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಗದಗ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ವೈಶಾಲಿ ಎಂ.ಎಲ್. ಅವರನ್ನು ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪುರ ಭವನದಲ್ಲಿ ಜನವರಿ 25ರಂದು ಜರುಗುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮುಖ್ಯ ಚುನಾವಣಾಧಿಕಾರಿಯವರ ಕಛೇರಿಯ ಪ್ರಕಟಣೆ ತಿಳಿಸಿದೆ.

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 24ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15,17 ಶಹಾಪುರ ಪೇಟೆ, ಜವಳಗಲ್ಲಿ ಉಳಿದ ಭಾಗಗಳು. ವಾರ್ಡ್ ನಂ. 29 ನೆಲ್ಸನ್ ಮಂಡೆಲಾ ಶಾಲೆ ಉಳಿದ ಭಾಗಗಳು. ವಾರ್ಡ್ ನಂ. 20, 23 ಕಗನಳ್ಳಿ ಹಾರೋಗೇರಿ ಭಾಗ 2, ಹೆಬಸೂರ ಲೈನ್, ಸೋಮನ ಗೌಡರ ಲೈನ್, ಹನುಮನ ಗರಡಿ ಲೈನ್, ದ್ರೌಪದಿ ಬಾಯಿ ವಿಭೂತಿಯವರ ಓಣಿ, ಕಾಳಮ್ಮ, ಕಮತರ ಪ್ಲಾಟ್, ಹೊನ್ನೆತ್ತಮ್ಮ ಭಾಗ 2 ಉಳಿದ ಭಾಗಗಳು.

ವಾರ್ಡ್ ನಂ. 22 ಅಮರೇಶ್ವರ ನಗರ ತಾಜಾ ನಗರ. ವಾರ್ಡ್ ನಂ. 24, 26 ಸಾಲಮನೆ, ತೆಗ್ಗಿನ ಪ್ಲಾಟ್, ಅಬ್ಬಿಗೇರಿ ಕಾಂಪೌಂಡ್, ಕಮ್ಮಾರ ಸಾಲ, ಉಡಚಮ್ಮನ ಗುಡಿ ಲೈನ್, ಮಕಾನಗಲ್ಲಿ ಉರ್ದು ಶಾಲೆ ಉಳಿದ ಭಾಗಗಳು. ವಾರ್ಡ್ ನಂ. 7 ಪಂಚಲಕ್ಷ್ಮಿ ಬಡಾವಣೆ ಭಾಗ–1,2,3,4. ವಾರ್ಡ್ ನಂ. 5 ರಂಗಪಜ್ಜನ ಮಠ ಭಾಗ –1,2.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ 14ನೇ ರಾಷ್ಟ್ರೀಯ ಮತದಾರರ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಚುನಾವಣಾ ಆಯೋಗ, ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಜನವರಿ 25ರಂದು ಬೆಳಿಗ್ಗೆ 10 ಗಂಟೆಗೆ 14ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾದಿಕಾರದ ಅಧ್ಯಕ್ಷರಾದ ಬಸವರಾಜ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ವೈಶಾಲಿ ಎಂ.ಎಲ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಗುರುಪ್ರಸಾದ ಕೆ, ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರಾದ ಎಸ್.ಜಿ. ಪಲ್ಲೇದ ಅವರು ಆಗಮಿಸುವರು.

ಉಪವಿಭಾಗಾಧಿಕಾರಿಗಳು ಹಾಗೂ ಮತದಾರ ನೋಂದಣಾದಿಕಾರಿಗಳಾದ ವೆಂಕಟೇಶ ನಾಯ್ಕ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀಮತಿ ಅನ್ನಪೂರ್ಣ ಎಂ. ಸ್ವಾಗತ ಕೋರಿದ್ದಾರೆ.

### ಭಾರತ್ ಜೋಡೋ ನ್ಯಾಯ ಯಾತ್ರೆಗೆ ಬಿಜೆಪಿಯಿಂದ ಅಡ್ಡಿ | ಜಿಲ್ಲಾ ಕಾಂಗ್ರೆಸ್‌ನಿಂದ ಪ್ರತಿಭಟನೆ

# ಕಾಂಗ್ರೆಸ್ ಪಕ್ಷ ಸುಮ್ಮನೇ ಕೂರುವುದಿಲ್ಲ

■ವಿಜಯಸಾಕ್ಷಿ ಸುದ್ದಿ, ಗದಗ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ ಯಾತ್ರೆ ಅಸ್ಸಾಂ ತಲುಪಿದ ಸಂದರ್ಭದಲ್ಲಿ ಅನೇಕ ಬಿಜೆಪಿ ಕಾರ್ಯಕರ್ತರು ಪಾದಯಾತ್ರೆಗೆ ಅಡ್ಡಿಪಡಿಸಿದ್ದಾರೆ. ಇದರಲ್ಲಿ ಅಲ್ಲಿನ ಸರ್ಕಾರ ಹಾಗೂ ಪೊಲೀಸರು ಕರ್ತವ್ಯ ನಿರ್ವಹಿಸಲು ವಿಫಲರಾಗಿದ್ದಾರೆ. ಸರ್ಕಾರದ ಧೋರಣೆಯನ್ನು ಗದಗ ಜಿಲ್ಲಾ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಮಹಾತ್ಮ ಗಾಂಧಿ ವೃತ್ತದ ಬಳಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ನ್ಯಾಯ ಯಾತ್ರೆಯಲ್ಲಿದ್ದ ರಾಹುಲ್ ಗಾಂಧಿಯವರಿಗೆ ದೇವಸ್ಥಾನ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ



ಬಿಸ್ವಾ ಯಾತ್ರೆ ಕೈಬಿಡುವಂತೆ ಹೇಳುತ್ತಿದ್ದಾರೆ. ಬಿಜೆಪಿ ಸರ್ಕಾರ ಅನಗತ್ಯ ಒತ್ತಡ ಹೇರುವ ಮೂಲಕ ಯಾತ್ರೆಯನ್ನು ತಡೆಯುವ ಕೆಲಸ ಮಾಡುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವಾಧಿಕಾರಿ ನಡೆ ಪ್ರದರ್ಶಿಸುತ್ತಿದ್ದಾರೆ. ಹೀಗೆಯೇ ಮುಂದುವರೆದರೆ, ಮುಂಬರುವ ದಿನಗಳಲ್ಲಿ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ.

ಬಿಜೆಪಿ ಸರಕಾರ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಚುನಾವಣೆ ಮಾಡುತ್ತಿದೆ. ಕಳೆದ ಹಲವು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ, ಜನರಲ್ಲಿ ದ್ವೇಷದ ರಾಜಕೀಯ ಬಿತ್ತುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷವು ಸಂವಿಧಾನ ಉಳಿಸುವ ಹಾಗೂ ಸಂವಿಧಾನ ಬದ್ಧವಾಗಿ ಕೆಲಸ ಮಾಡುತ್ತಿದೆ ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

> ಹಿಂದೂ ಸಂಪ್ರದಾಯದಂತೆ ದೇವರ ಪ್ರತಿಷ್ಠಾಪನೆ ಮಾಡುವಾಗ, ಪೂಜಾ ಕೈಂಕರ್ಯಗಳಲ್ಲಿ ದಂಪತಿ ಸಮೇತ ಪೂಜೆ ಸಲ್ಲಿಸಬೇಕು. ಆದರೆ, ಅಯೋಧ್ಯಾ ಶ್ರೀರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ನರೇಂದ್ರ ಮೋದಿ ಶಿಷ್ಟಾಚಾರ ಮರೆತಿದ್ದಾರೆ. ಸಂಪ್ರದಾಯ ಮುರಿದಾಗ ಕೆಟ್ಟ ಘಟನೆಗಳನ್ನು ಎದುರಿಸಬೇಕಾಗುತ್ತದೆ. ಪ್ರಧಾನಿ ಮೋದಿಯವರು ಸಾರ್ವಭೌಮ, ಒನ್ ಮ್ಯಾನ್ ಆರ್ಮಿಯಂತೆ ವರ್ತಿಸುತ್ತಿದ್ದಾರೆ. ಅವರಿಗೆ ಮಂತ್ರಿಗಳು, ಪಕ್ಷದ ನಾಯಕರು ಬೇಕಾಗಿಲ್ಲ.
>
> – ಜಿ.ಎಸ್. ಪಾಟೀಲ.
> ಶಾಸಕರು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು.

ಲೋಕಸಭೆ ಚುನಾವಣೆ ಬಂದಾಗ ಪ್ರಧಾನಿಗಳು ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರುತ್ತಾರೆ. ಭಾವನಾತ್ಮಕ ವಿಷಯದ ಮೂಲಕ ಮತದಾರರನ್ನು ತಮ್ಮ ಕಡೆ ಸೆಳೆಯುತ್ತಾರೆ. ಮೋದಿಯವರು ಹಾಗೂ ಬಿಜೆಪಿ ಪಕ್ಷ ಹೀಗೆಯೇ ಮುಂದುವರೆದರೆ, ಕಾಂಗ್ರೆಸ್ ಪಕ್ಷ ಸುಮ್ಮನೇ ಕೂರುವುದಿಲ್ಲ ಎಂದು ಎಚ್ಚರಿಸಿದರು.

ಮಾಜಿ ಶಾಸಕರಾದ ಬಿ.ಆರ್. ಯಾವಗಲ್ಲ, ಡಿ.ಆರ್. ಪಾಟೀಲ, ರಾಮಣ್ಣ ಲಮಾಣಿ, ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾಪ್ರಧಾನ ಕಾರ್ಯದರ್ಶಿ ವಿ.ಬಿ. ಸೋಮನಕಟ್ಟಿಮಠ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಉಮರ್ ಫಾರೂಕ್ ಹುಬ್ಬಳ್ಳಿ, ನಗರಸಭೆ ಸದಸ್ಯ ಬರಕತ್ ಅಲಿ ಮುಲ್ಲಾ, ಮುಖಂಡರಾದ ಗುರಣ್ಣ ಬಳಗಾನೂರ, ಜಿ.ಎಮ್. ದಂಡಿನ, ಪ್ರಭು ಮೇಟಿ, ಮೈಲಾರೆಪ್ಪ ಚಳ್ಳಮರದ ಸೇರಿದಂತೆ ನೂರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



### ರಾಜ್ಯ ಮಟ್ಟದ ಆಪ್ತ ಸಮಾಲೋಚಕರ ಕಾರ್ಯಾಗಾರದಲ್ಲಿ ಡಾ.ವೀಣಾ

# 25 ಜಿಲ್ಲೆಗಳಲ್ಲಿ ಸಮಾಲೋಚನಾ ಸಂಗಮ ಯಶಸ್ವಿ

■ವಿಜಯಸಾಕ್ಷಿ ಸುದ್ದಿ, ಗದಗ

ಹದಿಹರೆಯದ ಮಕ್ಕಳಲ್ಲಾಗುವ ದೈಹಿಕ ಬದಲಾವಣೆ ಮತ್ತು ಮಾನಸಿಕ ಭಾವನೆಗಳ ಬದಲಾವಣೆಯೂ ವಯೋಸಹಜ ಎನ್ನುವುದನ್ನು ಅರ್ಥೈಸಿ, ಸಮಾಜಕ್ಕೆ ಸಂಪನ್ಮೂಲ ವ್ಯಕ್ತಿಗಳನ್ನಾಗಿ ರೂಪಿಸಿಸುವುದೇ ಈ ಕಾರ್ಯಕ್ರಮದ ಉದ್ದೇಶವೆಂದು ಆರ್‌ಬಿಎಸ್‌ಕೆ ಮತ್ತು ಆರ್‌ಕೆಎಸ್‌ಕೆ ಉಪನಿರ್ದೇಶಕರಾದ ಡಾ.ವೀಣಾ ತಿಳಿಸಿದರು.

ನಗರದ ಪಂ.ಭೀಮಸೇನ ಜೋಶಿ ಜಿಲ್ಲಾ ರಂಗಮಂದಿರದಲ್ಲಿ ಮಂಗಳವಾರ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ 'ಸಮಾಲೋಚನಾ ಸಂಗಮ–2'ರ ರಾಜ್ಯ ಮಟ್ಟದ ಆಪ್ತ ಸಮಾಲೋಚಕರ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಮೊಟ್ಟಮೊದಲು 8 ಜಿಲ್ಲೆಗಳಲ್ಲಿ ಪ್ರಾರಂಭವಾದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮವು ಇವತ್ತಿಗೆ 25 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಜರಗುತ್ತಿರುವುದರಲ್ಲಿ ಎಲ್ಲಾ ಜಿಲ್ಲೆಯ ಆರ್‌ಸಿಎಚ್ ಅಧಿಕಾರಿಗಳು, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರ ಪಾತ್ರ ಹಿರಿದಾಗಿದೆ ಎಂದು ಅಭಿನಂದಿಸಿದರು.

ಡಾ. ಅರುಂಧತಿ.ಕೆ ಮಾತನಾಡಿ, ಸಮಾಲೋಚನಾ ಸಂಗಮ–2, ರಾಜ್ಯ ಮಟ್ಟದ ಆಪ್ತಸಮಾಲೋಚನಾ ಕಾರ್ಯಾಗಾರವನ್ನು ನಡೆಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಈ ಕಾರ್ಯಾಗಾರದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

> ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ. ಎಸ್.ಎಸ್. ನೀಲಗುಂದ ಮಾತನಾಡಿ, ಮಕ್ಕಳು ತಮ್ಮ ಕಿಶೋರ ಹಂತದಲ್ಲಿ ಎಲ್ಲದರ ಬಗ್ಗೆಯೂ ಕುತೂಹಲದಿಂದಿರುತ್ತಾರೆ. ತಮ್ಮಲ್ಲಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗೆ ವಿಚಲಿತಗೊಳ್ಳದೆ, ಧೂಮಪಾನ ಮತ್ತು ಮದ್ಯಪಾನದಂತಹ ವ್ಯಸನಗಳಿಗೆ ಬಲಿಯಾಗದೇ ಉತ್ತಮ ಶಿಕ್ಷಣವನ್ನು ಪಡೆದು ಸಫಲತೆ ಹೊಂದಿದಾಗ ಇಂತಹ ಕಾರ್ಯಾಗಾರಗಳು ಸಾರ್ಥಕತೆ ಹೊಂದುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಆರ್‌ಸಿಎಚ್ ಅಧಿಕಾರಿಗಳು, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಮ್.ಎ. ರೆಡ್ಡರ್, ಶಾಲಾ ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

### ಪಟ್ಟಣದಲ್ಲಿ ಆರ್‌ಎಎಫ್ ತುಕಡಿಯಿಂದ ಪಥಸಂಚಲನ

# ಜನರ ರಕ್ಷಣೆಯೇ ನಮ್ಮ ಗುರಿ



■ವಿಜಯಸಾಕ್ಷಿ ಸುದ್ದಿ, ರೋಣ

ನಾವು ಯಾವುದೋ ಜಾತಿ ಅಥವಾ ಧರ್ಮಕ್ಕೆ ಸಿಮಿತವಾಗಿಲ್ಲ. ಬದಲಾಗಿ ಸಾರ್ವಜನಿಕರ ಆಸ್ತಿಗಳನ್ನು ಸಂರಕ್ಷಣೆ ಮಾಡುವುದು ನಮ್ಮ ಏಕೈಕ ಗುರಿಯಾಗಿದೆ ಎಂದು ಆರ್‌ಎಎಫ್ ಕಮಾಂಡೆಂಟ್ ಸಚಿನ್ ಗಾಯಕವಾಡ ಹೇಳಿದರು.

ಅವರು ಮಂಗಳವಾರ ರೋಣ ಪಟ್ಟಣದಲ್ಲಿ ಪಥಸಂಚಲನ ನಡೆಸುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದರು.

ಆರ್‌ಎಎಫ್ ಕೂಡ ಸೈನಿಕರ ತಂಡವಿದ್ದಂತೆ. ಕರ್ನಾಟಕದ ಭದ್ರಾವತಿಯಲ್ಲಿ ನಮ್ಮ ತುಕಡಿಯಿದ್ದು, ಅತೀವ ಗಲಭೆ, ಬಡಿದಾಟ ಸೇರಿದಂತೆ ಇತರೆ ಸಮಾಜಘಾತುಕ ಚಟುವಟಿಕೆಗಳನ್ನು ತಹಬದಿಗೆ ತರುವಲ್ಲಿ ನಾವು ಸ್ಥಳೀಯ ಪೊಲೀಸ್ ಇಲಾಖೆಗೆ ಸಹಕರಿಸುತ್ತೇವೆ. ನಾಗರಿಕ ಸಮಾಜದ ರಕ್ಷಣೆಯೇ ನಮ್ಮ ಉದ್ದೇಶವಾಗಿದೆ ಎಂದರು.

ಜಿಲ್ಲೆಯಲ್ಲಿ ಜ.19ರಿಂದ ಪಥಸಂಚಲನವನ್ನು ನಡೆಸುತ್ತಿದ್ದು, ಇಲ್ಲಿನ ಜನರು ಸಹಬಾಳ್ವೆಗೆ ಹೆಚ್ಚಿನ ಮಹತ್ವ ನೀಡುತ್ತಿರುವುದನ್ನು ಗಮನಿಸಿದ್ದೇವೆ. ಸಾರ್ವಜನಿಕರು ಸಹ ಪೊಲೀಸ್ ಇಲಾಖೆಯ ಜೊತೆಗೆ ಕೈಜೋಡಿಸಿ ಶಾಂತಿ ಸ್ಥಾಪಿಸಲು ಮುಂದಾಗಬೇಕು ಎಂದರು.

ಜಿಲ್ಲೆಯ ಸಾರ್ವಜನಿಕರು ಭಯಮುಕ್ತರಾಗಿ ತಮ್ಮ ನಿತ್ಯದ ಕಾಯಕದಲ್ಲಿ ತೊಡಗಿಕೊಳ್ಳಬೇಕು.

▸▸3ನೇ ಪುಟಕ್ಕೆ

### ಜೆಡಿ (ಎಸ್) ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡರ ಆರೋಪ

# ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿ ಕುಂಠಿತ

■ವಿಜಯಸಾಕ್ಷಿ ಸುದ್ದಿ, ಗದಗ

ಗ್ಯಾರಂಟಿ ಯೋಜನೆ ಗಳಿಂದಾಗಿ ಇಡೀ ರಾಜ್ಯದಲ್ಲೇ ಯಾವುದೇ ಅಭಿವೃದ್ಧಿಯಾಗುತ್ತಿಲ್ಲ. ಅಭಿವೃದ್ಧಿ ಕುಂಠಿತವಾಗಿದೆ ಎಂದು ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ಆರೋಪಿಸಿದರು.

ನಗರದ ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಅಧಿಕಾರಕ್ಕೆ ಬಂದು ಏಳು ತಿಂಗಳು ಕಳೆದರೂ ಸಹ ಇದುವರೆಗೆ ಯಾವುದೇ ಒಂದು ಅಭಿವೃದ್ಧಿ ಕೆಲಸಕ್ಕೆ ಆದ್ಯತೆ ನೀಡಿಲ್ಲ. ಬರೀ ಗ್ಯಾರಂಟಿಯಲ್ಲಿ ಕಾಲ ಕಳೆಯುತ್ತಿದ್ದು, ರೈತರು ಬರಗಾಲದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ರಾಜ್ಯ ಸರಕಾರ ಈ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.




ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ರಸ್ತೆಗಳು ಕಲೆಕ್ಷನ್ ಸೆಂಟರ್‌ಗಳಾಗುತ್ತಿವೆ. ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕೆ ದುಡ್ಡೆಲ್ಲಾ ಹೋಗುತ್ತಿದ್ದು, ಸರಕಾರ ನಡೆಸಲು ಅವರ ಬಳಿ ಹಣ ಇಲ್ಲವಾಗಿದೆ. ಪೊಲೀಸರು ವಿಧಿಸಿದ ದಂಡದ ಹಣ ಬರದಿದ್ದರೆ ಸರಕಾರ ನಡೆಸುವುದೇ ಕಷ್ಟ ಎನ್ನುವಂತಾಗಿದೆ. ಸರಕಾರಿ ನೌಕರರು, ಗುತ್ತಿಗೆ ನೌಕರರಿಗೆ ಕಾಲಕ್ಕೆ ಸರಿಯಾಗಿ ಸಂಬಳ ಆಗುತ್ತಿಲ್ಲ. ರಾಜ್ಯ ಸರಕಾರ ಅಸ್ತಿತ್ವಕ್ಕೆ ಬಂದು ಏಳು ತಿಂಗಳು ಕಳೆದರೂ ಅಭಿವೃದ್ಧಿ ಕೆಲಸಗಳು ಪ್ರಾರಂಭಗೊಂಡಿಲ್ಲ ಎಂದು ಆರೋಪ ಮಾಡಿದರು.

ರಾಜ್ಯ ಸರಕಾರ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಜತೆಗೆ ಬ್ಯಾಂಕ್‌ಗಳು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳು ಒತ್ತಾಯಪೂರ್ವಕವಾಗಿ ರೈತರಿಂದ ಸಾಲ ವಸೂಲಾತಿ ಮಾಡುತ್ತಿದ್ದು, ಸರ್ಕಾರ ಇದಕ್ಕೆ ಕಡಿವಾಣ ಹಾಕಬೇಕು. ರೈತರು ಅಸಲು ಕಟ್ಟಿದರೆ ಬಡ್ಡಿ ಮನ್ನಾ ಮಾಡುವುದಾಗಿ ರಾಜ್ಯ ಸರಕಾರ ಘೋಷಿಸಿದೆ. ಆದರೆ, ರಾಜ್ಯದ ತುಂಬೆಲ್ಲಾ ಬರ ಆವರಿಸಿದೆ. ರೈತರು ಅಸಲು ಕಟ್ಟುವುದಾದರೂ ಹೇಗೆ? ಎಂದು ಪ್ರಶ್ನೆ ಮಾಡಿದರು.

ರಾಜ್ಯ ಸರಕಾರ ತನ್ನ ಆದೇಶವನ್ನು ಹಿಂಪಡೆಯಬೇಕು. ಜತೆಗೆ ಕಷ್ಟದಲ್ಲಿರುವ ಎಲ್ಲ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಸಾಲ ವಸೂಲಾತಿ ಹೆಸರಿನಲ್ಲಿ ಬ್ಯಾಂಕ್‌ಗಳು, ಖಾಸಗಿ ಹಣಕಾಸು ಸಂಸ್ಥೆಯವರು ಒತ್ತಡ ಹೇರುವುದಕ್ಕೆ ನಿರ್ಬಂಧ ವಿಧಿಸಬೇಕು' ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಈರಣ್ಣ ಬಾಳಿಕಾಯಿ, ವೀರಭದ್ರೇಶ್ವರ ಅಕ್ಕಿ, ಬಸವರಾಜ ಅಪ್ಪಣ್ಣವರ್, ಪ್ರಫುಲ್ ಪುಣೇಕರ ಇದ್ದರು.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ
ಹೃದಯದಿಂದ ಕೇಳಿಸಿಕೊಳ್ಳಿ
–ಸುಭಾಷಿತ

## ಸಂಪಾದಕೀಯ

### ಶ್ರೀ ರಾಮನ ಆದರ್ಶ ಪಾಲನೆ ಆಗಲಿ

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ಭಕ್ತಿ ಭಾವದ ಜೊತೆಗೆ ಅತ್ಯಂತ ಅದ್ದೂರಿಯಾಗಿ ನಡೆಯಿತು. ದೇಶಾದ್ಯಂತ ಶ್ರೀರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯನ್ನ ಜನ ಹಬ್ಬದಂತೆ ಆಚರಿಸಿದರು. ಪ್ರಭು ಶ್ರೀರಾಮನನ್ನ ಜಪಿಸಿದರು.

ದೂರದ ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆಯುತ್ತಿದ್ದರೆ ನಮ್ಮೂರಿನ ಪ್ರತಿಯೊಂದು ದೇವಸ್ಥಾನದಲ್ಲೂ ವಿಶೇಷ ಪೂಜೆ, ಭಜನೆ, ಹೋಮ, ಮಹಾಪ್ರಸಾದ ವಿತರಣೆ ಮಾಡಿ ಪ್ರಭು ಶ್ರೀರಾಮ ಆಗಮನವನ್ನ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಆಚರಿಸಿದರು.

ಅಯೋಧ್ಯೆಯಲ್ಲಿ ಪ್ರಭು ಶ್ರೀ ರಾಮ ನೆಲೆಯೂರಿದ್ದಾನೆ. ಇನ್ನೇನಿದ್ದರೂ ಶ್ರೀ ರಾಮನ ಆದರ್ಶಗಳನ್ನ ಪಾಲಿಸಬೇಕಷ್ಟೆ. ಸ್ವಾತಂತ್ರ್ಯ ನಂತರ ಶ್ರೀರಾಮ ಮಂದಿರ ನಿರ್ಮಾಣ ರಾಜಕೀಯವಾಗಿ ಬಳಸಿಕೊಳ್ಳಲಾಯಿತು. ಇತ್ತೀಚಿನ ಕೆಲ ದಶಕಗಳಲ್ಲಂತೂ, ಶ್ರೀ ರಾಮನೇ ರಾಜಕೀಯ ಶಕ್ತಿಯಾಗಬೇಕಾಯಿತು.

ಅಂತಿಮವಾಗಿ ಹಲವು ಸಂಘರ್ಷಗಳು, ಕಾನೂನು ಹೋರಾಟದ ನಂತರ ಶ್ರೀರಾಮ ಮಂದಿರ ನೆಲೆಯೂರಲು ಸಾಧ್ಯವಾಯಿತು. ಇನ್ನಾದರೂ ರಾಮರಾಜ್ಯ ನಿರ್ಮಾಣದ ಕನಸು ನನಸಾಗುವತ್ತ ಚಿಂತನೆ ಆರಂಭವಾಗಬೇಕು. ರಾಮಲಲ್ಲಾನನ್ನು ಇನ್ನಾದರೂ ರಾಜಕೀಯಕ್ಕೆ ಬಳಸಿಕೊಳ್ಳದೆ, ಅವನ ರಾಮ ರಾಜ್ಯದ ಕನಸು ನನಸು ಮಾಡಬೇಕು.

ಕನಿಷ್ಠ ಪಕ್ಷ ಅಯೋಧ್ಯೆಯ ನಾಡಿನಲ್ಲಾದರೂ ರಾಮರಾಜ್ಯ ನಿರ್ಮಾಣವಾಗಲಿ. ಆ ಮೂಲಕ ದೇಶದ ಇನ್ನಿತರ ರಾಜ್ಯಗಳಿಗೆ ರಾಮ ರಾಜ್ಯ ಎಂದರೆ ಏನು ಎನ್ನುವ ಪ್ರಶ್ನೆಗೆ ಉತ್ತರ ನೀಡುವಂತಿರಲಿ. ಶಾಂತಿ ಸೌಹಾರ್ದತೆ, ಪ್ರೀತಿ ವಿಶ್ವಾಸ ಅಯೋಧ್ಯೆ ನಾಡಿನಲ್ಲಿ ಮೂಡಲಿ.

## ಪುಟ್ಟ ಪುಟ್ಟ ಹೆಜ್ಜೆಯಿಟ್ಟು, ಅತ್ತಿತ್ತ ನೋಡುತ್ತ ಬಂದನಲ್ಲ ರಾಮ ಲಲ್ಲಾ!

# ಸದ್ಗುಣಗಳನ್ನು ರಾಮನೇ ಕಲಿಸಲಿ

ಈ ಸಲ ನಮ್ಮಲ್ಲಿ ತಿಂಗಳ ಮೊದಲೇ ಯುಗಾದಿ ಹಬ್ಬ ಆಚರಣೆಯಾಗಿದೆ! ಅದೆಷ್ಟೋ ಸಾವಿರ–ಲಕ್ಷ ಬಾರಿ ಉದಿಸಿ ಅಸ್ತರಾದ ಸೂರ್ಯ–ಚಂದ್ರರು ಈ ದಿನಕ್ಕಾಗಿಯೇ ಎದುರು ನೋಡುತ್ತಿದ್ದರೇನೋ ಎಂಬಂತಿದೆ. ಕಾಲಗರ್ಭದಲ್ಲಿ ಸೇರಿಹೋಗಿದ್ದ ವಾಸ್ತವಗಳು ಅವರಿಬ್ಬರಿಗೆ ಮಾತ್ರವಲ್ಲವಾ ತಿಳಿದಿದ್ದು?! ನಾವು, ಮನುಷ್ಯರು ನಂಬಿಕೆಯ ಆಧಾರದಲ್ಲಿ ಮುಂದುವರೆದಿದ್ದೇವೆ. ಅಯೋಧ್ಯೆಗೆ ಪ್ರಭು ಶ್ರೀರಾಮಚಂದ್ರ ಬಂದಿದ್ದಾನೆ, ರಾಮ ಲಲ್ಲಾ ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಅತ್ತಿತ್ತ ನೋಡುತ್ತ ವಿರಾಜಮಾನನಾಗಿದ್ದಾನೆ.

ಶ್ರೀರಾಮ ಯಾರು, ಅವನು ಯಾವ ವಂಶದವನು, ಯಾವ ಜಾತಿಯವನು? ಎಷ್ಟೋ ಸಾವಿರ ವರ್ಷಗಳ ಹಿಂದೆ ನಡೆದಿದ್ದಕ್ಕೆ ಆಧಾರವೇನು? ಸಾಕ್ಷಿಯೇನು? ನೋಡಿದವರು ಯಾರಿದ್ದಾರೆ? ಇಷ್ಟು ವರ್ಷವೂ ಆಡಳಿತ ನಡೆಸಿದ ಎಲ್ಲಾ ರಾಜಕೀಯ ಪಕ್ಷಗಳ ಪ್ರಶ್ನೆ–ಉತ್ತರಗಳ ಆಚೆ ನಿಂತು ಯೋಚಿಸಿದರೆ... ರಾಮಾಯಣದ ಕಥಾ ಹಂದರಕ್ಕೆ ಸಂಬಂಧಿಸಿದ ಅನೇಕಾನೇಕ ವಿಷಯಗಳಿಗೆ ಇಂದಿಗೂ ಪುರಾವೆಗಳು ಸಿಗುತ್ತವೆ. ಧನುಷ್ಕೋಡಿಯಲ್ಲಿ ರಾಮ ಸೇತುವಿನ ಅಸ್ಥಿತ್ವದ ಬಗ್ಗೆ ನಾಸಾ ನೀಡಿದ ಆಧಾರಗಳೇ ಸಾಕಲ್ಲ?

ಹಿಂದಿನ ಘಟನಾವಳಿಗಳನ್ನೆಲ್ಲ ಮೀರಿ ನಿಂತ ರಾಮ ಮತ್ತೆ ಅಯೋಧ್ಯೆಗೆ ಬಂದಿದ್ದಾನೆ, ತನ್ನ ಸ್ಥಾನದಲ್ಲಿಯೇ ನೆಲೆ ನಿಲ್ಲುತ್ತ, ಸಕಲರನ್ನೂ ಹರಸುತ್ತಿದ್ದಾನೆ. ಇಂಥದೊಂದು ಬಲವಾದ ನಂಬಿಕೆ ಹೊಂದಿರುವ ನಮ್ಮೆಲ್ಲರಿಗೂ ಇದಕ್ಕಿಂತ ದೊಡ್ಡ ಸುಕೃತ ಇನ್ನೊಂದು ಸಿಗಲಿಕ್ಕಿಲ್ಲ ಬಿಡಿ! ಇದೆ–ಇಲ್ಲಗಳ ನಡುವಿನ ಹೊಯ್ದಾಟದಲ್ಲಿ ಶ್ರೀರಾಮ ಜನ್ಮಭೂಮಿ ಅಯೋಧ್ಯೆ ರಾಜಕೀಯ ಬಣ್ಣ ಪಡೆದುಕೊಂಡು ದಶಕಗಳೇ ಕಳೆದುಹೋಗಿದ್ದವು. ಆದರೆ, ಮರ್ಯಾದಾ ಪುರುಷೋತ್ತಮ, ಪ್ರಭು ಶ್ರೀರಾಮನಲ್ಲಿ ಯಾವುದೇ ರಾಜಕೀಯದ ಲೇಶವೂ ಇರಲಿಲ್ಲ.

ಹಾಗೆ ನೋಡಿದರೆ, ರಾಮನಾಗುವುದು ನಿಜಕ್ಕೂ ಕಷ್ಟ. ರಾಮನಂತಾಗುವುದು, ರಾಮನಂತಿರುವುದೂ ಕಷ್ಟ. ರಾಮನನ್ನು ಅರಿಯುವುದು ಕಷ್ಟ. ಅಪ್ಪನ ಮಾತಿಗೆ ಬೆಲೆ ಕೊಡುವುದು ನಮಗೆ ಕಷ್ಟ, ಸಿರಿ–ಸಂಪತ್ತು ನೀಡುವ ಸಿಂಹಾಸನ ತೊರೆಯುವುದು ಕಷ್ಟ, ಏಕಪತ್ನಿ ವ್ರತಸ್ಥನಾಗುವುದು ಕನಸಿನ ಮಾತಾಯ್ತು. ನಮ್ಮ ನಮ್ಮ ಸ್ವಾರ್ಥವನ್ನು ಬಿಟ್ಟು ಹೀಗೂ ಬದುಕಬಹುದು ಎಂಬುದಕ್ಕೆ ಪ್ರಭು ಶ್ರೀರಾಮಚಂದ್ರನೇ ಸಾಕ್ಷಿ. ರಾಮ ಬಂದಿದ್ದಾನಲ್ಲ, ಇವೆಲ್ಲ ಸದ್ಗುಣಗಳನ್ನು



ಅವನೇ ಕಲಿಸಲಿ. ನಾವೆಲ್ಲರೂ ಜಾತಿ–ಪಂಥಗಳ ವ್ಯತ್ಯಾಸ ಮಾಡದೇ ಅವೆಲ್ಲ ಸದ್ಗುಣಗಳನ್ನು ಅರಿಯೋಣ.

ಭೂಮಿಯ ಮೇಲಿರುವ ಸಕಲರೂ ಜಾತಿ, ಮತ, ಪಂಥಗಳನ್ನು ಬದಿಗೊತ್ತಿ ಶ್ರೀರಾಮನಿಂದ ಕಲಿಯಬೇಕಿರುವ, ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕಿರುವ ಹತ್ತಾರು ಸಂಗತಿಗಳಿವೆ. ರಾಜಕೀಯ ಬಿಟ್ಟು, ಸ್ವಾರ್ಥ ಕಳೆದು, ಅಂತಹ ಸದ್ಗುಣಗಳನ್ನಾದರೂ ಅಳವಡಿಸಿಕೊಳ್ಳಲು ಮುಂದಾಗಬಹುದಲ್ಲ? ಪ್ರಭು ಶ್ರೀರಾಮ ತನ್ನ ಜೀವನದ ಎಲ್ಲಾ ಕರ್ತವ್ಯಗಳನ್ನು ಅತ್ಯಂತ ಪರಿಪೂರ್ಣವಾಗಿ, ಸಮರ್ಥವಾಗಿ ಪೂರೈಸಿ ಹೆಸರುವಾಸಿಯಾಗಿದ್ದಾನೆ. ಮುಖ್ಯವಾಗಿ, ನಾಯಕತ್ವದ ಪಾಠಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಯಾಕೆಂದರೆ, ಅವು ಇಂದಿನ ಸಮಯದಲ್ಲಿ ಹೆಚ್ಚು ಪ್ರಸ್ತುತವಾಗಿವೆ.

ಕಷ್ಟದ ಸಮಯದಲ್ಲೂ ಭಗವಾನ್ ರಾಮನ ಅಪಾರ ಕರ್ತವ್ಯ ಪ್ರಜ್ಞೆ ಮತ್ತು ಹೊಣೆಗಾರಿಕೆ ಎಲ್ಲರಿಗೂ ಉತ್ತಮ ಉದಾಹರಣೆಯಾಗಿದೆ. ಇಂದಿನ ಕಾರ್ಪೊರೇಟ್ ಪ್ರಪಂಚದ ವಿಷಯಕ್ಕೆ ಬಂದಾಗ, ನಾಯಕರು ಸಹ ತಮ್ಮ ನಿರ್ಧಾರಗಳಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಇದು ಸಮಾಜದ ಮುಂದಾಳುಗಳಲ್ಲಿ, ತಂಡದ ಸದಸ್ಯರಲ್ಲಿ ಉತ್ತರದಾಯಿತ್ವದ ಸಂಸ್ಕೃತಿಯನ್ನು ಸೃಷ್ಟಿಸುತ್ತದೆ. ಮಾತಿಗಿಂತ ಕೃತಿಗಳ ಮೂಲಕ ಜನರನ್ನು ಮುನ್ನಡೆಸುವ ಗುಣ ಇತರರೂ ತಂಡವನ್ನು ಅನುಸರಿಸುವಂತೆ ಪ್ರೇರೇಪಿಸಲು ಸಹಾಯ ಮಾಡುತ್ತದೆ.

ರಾವಣನ ವಿರುದ್ಧದ ಯುದ್ಧದ ಸಮಯದಲ್ಲಿಯೂ, ಸವಾಲುಗಳನ್ನು ಎದುರಿಸಲು ಭಗವಾನ್ ರಾಮನ ಶಾಂತಚಿತ್ತತೆ, ಕಾರ್ಯತಂತ್ರದ ವಿಧಾನ ನಮ್ಮೆಲ್ಲರಿಗೂ ದಾರಿದೀಪ. ಆಧುನಿಕ ಕಾಲದಲ್ಲಿ ನಾಯಕತ್ವದ ವಿಷಯಕ್ಕೆ ಬಂದಾಗ, ಒತ್ತಡದ ಸಂದರ್ಭಗಳಲ್ಲಿ ಶಾಂತವಾಗಿರುವುದು ಮತ್ತು ಕಾರ್ಯತಂತ್ರಾತ್ಮಕವಾಗಿ ಯೋಚಿಸುವ ಮಾರ್ಗದರ್ಶನ ನೀಡುತ್ತಾನೆ ಶ್ರೀರಾಮ.

ಭಗವಾನ್ ರಾಮ ಎಲ್ಲರೊಂದಿಗೂ ಸ್ಪಷ್ಟವಾಗಿ ಮತ್ತು ಸಹಾನುಭೂತಿಯಿಂದ ಮಾತನಾಡುವ ಗುಣ ಹೊಂದಿದ್ದ. ಇದೊಂದೇ ಸಾಕಲ್ಲ ಉತ್ತಮ ನಾಯಕತ್ವದ ಕೌಶಲ್ಯ ಕಲಿಯಲು?! ಜನಮೆಚ್ಚುಗೆ ಪಡೆದ ರಾಜಕುಮಾರನಾಗಿದ್ದರೂ, ಭಗವಾನ್ ರಾಮನ ನಮ್ರತೆಗೆ ಸಾಟಿಯಿಲ್ಲ. ಇಷ್ಟೆಲ್ಲ ದಾರಿ ತೋರುವ ರಾಮನನ್ನು ಆರಾಧಿಸದಿರಲು ಕಾರಣಗಳಾದರೂ ಇದ್ದಾವಾ?

– ಅಲೆಮಾರಿ.

## ಜ.26ರಂದು ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನ ಜನವರಿ ಮತ್ತು ಫೆಬ್ರುವರಿ 2024ರ ಮಾಹೆಯಲ್ಲಿ ಸಂವಿಧಾನ ದಿನಾಚರಣೆಯ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಜನವರಿ 26 ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಗದಗ ಬೆಟಗೇರಿ ನಗರಸಭೆ ಆವರಣದಲ್ಲಿ ಚಾಲನೆ ನೀಡಲಿದ್ದಾರೆ.

ಜ. 26 ರಿಂದ ಫೆಬ್ರುವರಿ 23 ರವರೆಗೆ ಸಂವಿಧಾನ ಆಶಯ ಮತ್ತು ಮೌಲ್ಯಗಳನ್ನು ಒಳಗೊಂಡ ಸ್ತಬ್ಧ ಚಿತ್ರವನ್ನು ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಪ್ರದರ್ಶಿಸಿ ಎಲ್ಲ ಸಾರ್ವಜನಿಕರಿಗೆ ಅರಿವು ಮೂಡಿಸುವುದರೊಂದಿಗೆ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಕ್ಕೆ ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಗಳು ಪಾಲ್ಗೊಳ್ಳಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿಸಿಎ 2ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದ ಶೈಕ್ಷಣಿಕ ಸಾಲಿನ ಬಿಸಿಎ ಕೋರ್ಸಿನ 2ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.

ಕೀರ್ತಿ ಹೊಸಮಠ ಪ್ರಥಮ(695), ವೀಣಾ ಸಿ ದ್ವಿತಿಯ(683), ನೇಹಾ ಕಲಬುರ್ಗಿ ತೃತೀಯ(668), ಅಂಜುಮ ಅರ್ ನಾಲ್ಕನೇ ಸ್ಥಾನ(654), ಬೀಮಮ್ಮ ಬಿಂಗಿ ಐದನೇ ಸ್ಥಾನ(651) ಪಡೆದಿದ್ದಾರೆ

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ, ಪ್ರಾಚಾರ್ಯ ಬಿ.ಎಸ್. ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕರಾದ ಪ್ರೊ. ಸವಿತಾ ಪೂಜಾರ ಹಾಗೂ ಸಿಬ್ಬಂದಿ ವರ್ಗದವರು ಶ್ಲಾಘಿಸಿದ್ದಾರೆ.

## ಇಂದು ಚಾಲನಾ ಸಿಬ್ಬಂದಿಗಳ ದಿನ

■ ವಿಜಯಸಾಕ್ಷಿ ಸುದ್ದಿ, ಗದಗ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 24ನೇ ಜನವರಿ 2024 ರಂದು "ಚಾಲನಾ ಸಿಬ್ಬಂದಿಗಳ ದಿನ" ಆಚರಿಸಲಾಗುತ್ತಿದೆ. ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ ಸುರಕ್ಷಿತ ಸಾರಿಗೆ ಸೌಲಭ್ಯವನ್ನು ಒದಗಿಸುವ ಧ್ಯೇಯವನ್ನು ಹೊಂದಿರುತ್ತದೆ. ಪ್ರಯಾಣಿಕರ ಸುರಕ್ಷತೆಯೇ ಸಂಸ್ಥೆಯ ಪ್ರಥಮ ಆದ್ಯತೆಯಾಗಿರುತ್ತದೆ. ಸಂಸ್ಥೆಯ ವತಿಯಿಂದ ಅಪಘಾತಗಳನ್ನು ಕಡಿಮೆ ಮಾಡಲು, ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ನೀಡುವಲ್ಲಿ ಚಾಲನಾ ಸಿಬ್ಬಂದಿಗಳ ಸ್ವಯಂ ಪ್ರೇರಣೆ ಮತ್ತು ಸಂಸ್ಥೆಗೆ ಅವರ ಸಮರ್ಪಣೆ ಕಾರಣವಾಗಿದೆ. ಉತ್ತಮ ಸಾರಿಗೆ ಸೌಲಭ್ಯ ನೀಡುವಲ್ಲಿ ಚಾಲನಾ ಸಿಬ್ಬಂದಿಗಳ ಶ್ರಮ, ಚಾಲನಾ ಚಾಣಾಕ್ಷತನ, ರಸ್ತೆ ಸುರಕ್ಷತಾ ಕ್ರಮಗಳ ಅನುಸರಣೆಯಿಂದ ಸಂಸ್ಥೆಯಲ್ಲಿ ಅವರ ಸೇವೆ ಶ್ಲಾಘನೀಯವಾಗಿದೆ.

ಜನವರಿ 24ರಂದು ರಸ್ತೆ ಸುರಕ್ಷತಾ ಉಪಕ್ರಮದ ಭಾಗವಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಎಲ್ಲಾ ವಿಭಾಗ, ಘಟಕ, ವಿಭಾಗೀಯ ಕಾರ್ಯಾಗಾರ, ಪ್ರಾದೇಶಿಕ ಕಾರ್ಯಾಗಾರ, ತರಬೇತಿ ಕೇಂದ್ರಗಳು ಹಾಗೂ ಬಸ್ ನಿಲ್ದಾಣಗಳಲ್ಲಿ "ಚಾಲನಾ ಸಿಬ್ಬಂದಿಗಳ ದಿನ"ವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಭ್ರಮದ ಶ್ರೀರಾಮೋತ್ಸವ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಶ್ರೀರಾಮ ಮಂದಿರ ಸೇರಿದಂತೆ ವಿವಿಧ ಪ್ರಮುಖ ದೇವಸ್ಥಾನ ಹಾಗೂ ಶ್ರೀರಾಮ ಭಕ್ತರ ಮನೆ ಮನೆಗಳಲ್ಲಿ ಅಯೋಧ್ಯೆ ಬಾಲರಾಮ ಪ್ರತಿಷ್ಠಾಪನೆಯ ಅಂಗವಾಗಿ ಹೋಮ–ಹವನ, ವಿಶೇಷ ಪೂಜೆ, ಅಭಿಷೇಕ ಹಾಗೂ ಅನ್ನಪ್ರಸಾದ ಕಾರ್ಯಕ್ರಮಗಳು ಸಂಭ್ರಮದಿಂದ ಜರುಗಿದವು.

ಎಸ್.ಎಸ್.ಹಿರೇಮಠ, ರಮೇಶ ಬಾಳಿಕಾಯಿ, ಮಾಹಾಂತೇಶ ನಪೂರಿಮಠ, ಶರಣಪ್ಪ ಬಾಳಿಕಾಯಿ, ಬಸವರಾಜ ಸುಂಕಾಪೂರ, ಸಂಗಪ್ಪ ಮಟ್ಟಿ, ಬಸವರಾಜ ಲಾಳಿ, ದಾವೂದ ಜಮಾಲ, ಗಿರೀಶ ಪಿರಂಗಿ, ಮಹೇಶ ಶಿರಹಟ್ಟಿ, ಸೇರಿದಂತೆ ನೂರಾರು ಶ್ರೀರಾಮನ ಭಕ್ತರು ಇದ್ದರು.

## ತಾಲೂಕಿನಾದ್ಯಾಂತ ಸಂಭ್ರಮದ ರಾಮೋತ್ಸವ

■ ವಿಜಯಸಾಕ್ಷಿ ಸುದ್ದಿ, ರೋಣ

ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ರೋಣ ತಾಲೂಕಿನಾದ್ಯಾಂತ ಸಂಭ್ರಮದ ರಾಮೋತ್ಸವ, ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ನಗರದ ವೀರಭದ್ರೇಶ್ವರ ದೇವಸ್ಥಾನದ ಬಳಿ ಗುಲಗಂಜಿ ಮಠದ ಗುರುಪಾದ ಶ್ರೀಗಳ ಸಾನ್ನಿಧ್ಯದಲ್ಲಿ ಪೂಜಾ ಕಾರ್ಯಗಳು ಜರುಗಿತಲ್ಲದೆ, ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿತು.



ಕರ ಸೇವಕ ಅಶೋಕ ದೇಶಣ್ಣವರ ಮಾತನಾಡಿ, ಶ್ರೀರಾಮ ಮಂದಿರ ನಿರ್ಮಾಣ ಕೋಟ್ಯಾಂತರ ಹಿಂದುಗಳ ಕನಸಾಗಿತ್ತು. ಈ ದಿನ ನಮ್ಮ ಕನಸು ಸಾಕಾರಗೊಂಡಿದೆ ಎಂದು ತಮ್ಮ ಹೋರಾಟದ ನೆನಪುಗಳನ್ನು ಮೆಲಕು ಹಾಕಿದರು. ಇದೇ ಸಂಧರ್ಭದಲ್ಲಿ ಹಿಂದೂ ಸಮಾಜದ ವತಿಯಿಂದ ಕರಸೇವಕರಾದ ಅಶೋಕ ದೇಶಣ್ಣವರ, ಚಂದ್ರಶೇಖರ ಕೊಣ್ಣೂರ ಅವರನ್ನು ಸನ್ಮಾನಿಸಲಾಯಿತು.

ಗ್ರಾಮೀಣ ಭಾಗಗಳಲ್ಲಿ ಮನೆಗಳ ಮುಂದೆ ಬಣ್ಣ ಬಣ್ಣದ ರಂಗೋಲಿಗಳೊಂದಿಗೆ ಅಲಂಕರಿಸಿ, ಸಿಹಿ ಹಂಚಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಮಾರನಬಸರಿ ಗ್ರಾಮದಲ್ಲಿ ರಾಮ ಭಕ್ತರು ಅನ್ನಸಂತರ್ಪಣೆ ನೆರವೇರಿಸಿದರು. ಅಂದಾನಗೌಡ್ರ ಲಿಂಗನಗೌಡ್ರ, ಅಶೋಕ ನವಲಗುಂದ, ಅನಿಲ ಪಲ್ಲೇದ, ಭರಮಗೌಡ ಲಿಂಗನಗೌಡ್ರ, ಬಸವರಾಜ ಕೊಟಗಿ, ಬಸವರಾಜ ರಂಗನಗೌಡ್ರ, ಬಿಜೆಪಿ ಮುಖಂಡರು, ಕಾರ್ಯಕರ್ತರು ಸೇರಿದಂತೆ ಶ್ರೀರಾಮ ಭಕ್ತರು ಪಾಲ್ಗೊಂಡಿದ್ದರು.

## ಜ.28ರಂದು ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್ & ಡಿಎಆರ್) (ಪುರುಷ & ತೃತೀಯ ಲಿಂಗ ಪುರುಷ) 3064 ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ಜನವರಿ 28 ರಂದು ಬೆಳಿಗ್ಗೆ 11–00 ರಿಂದ 12–30 ಗಂಟೆಯವರೆಗೆ ರಾಜ್ಯಾದ್ಯಾಂತ ನಡೆಸಲಾಗುವುದು.

ಸದರಿ ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಕರೆ ಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಲಾಗುವುದು.

ಕರೆ ಪತ್ರದ ಲಿಂಕ್ ಸಹ ಕಳುಹಿಸಲಾಗುವುದು. ಅಬ್ಯರ್ಥಿಗಳು ಕರೆ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗಲು ಸೂಚಿಸಿದೆ.

ವಸ್ತ್ರ ಸಂಹಿತೆ : ಪುರುಷ ಮತ್ತು ತೃತೀಯ ಲಿಂಗ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಸಾಧ್ಯವಾದಷ್ಟು ಕಾಲರ್ ರಹಿತ ಶರ್ಟ್‌ಗಳನ್ನು ಧರಿಸುವುದು, ಜಿಪ್ ಪ್ಯಾಕೆಟ್‌ಗಳು, ದೊಡ್ಡ ಬಟನ್‌ಗಳು ಇರುವ ಶರ್ಟ್‌ಗಳನ್ನು ಧರಿಸತಕ್ಕದ್ದಲ್ಲ. ಜೀನ್ಸ್ ಪ್ಯಾಂಟ್ ಮತ್ತು ಹೆಚ್ಚಿನ ಜೇಬುಗಳಿರುವ ಪ್ಯಾಂಟ್‌ಗಳನ್ನು ಧರಿಸತಕ್ಕದ್ದಲ್ಲ. ಪರೀಕ್ಷಾ ಕೇಂದ್ರದೊಳಗೆ ಶೂಗಳನ್ನು ನಿಷೇದಿಸಲಾಗಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಬಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸುವುದು. ಕುತ್ತಿಗೆ ಸುತ್ತಾ ಯಾವುದೇ ಲೋಹದ ಆಭರಣಗಳು ಅಥವಾ ಉಂಗುರ ಮತ್ತು ಕಡಗಳನ್ನು ಧರಿಸುವುದು ನಿಷೇಧಿಸಲಾಗಿದೆ ಎಂದು ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಸಮೃದ್ಧ ಜೀವನ ಕೋ–ಆಪ್ ಸೊಸೈಟಿ ವಂಚಿತ ಸದಸ್ಯರ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸಮೃದ್ಧ ಜೀವನ ಮಲ್ಟಿ ಪರ್ಪಸ್ ಕೋ–ಆಪ್ ಸೊಸೈಟಿ ಲಿ. ಇದರ ವಂಚಿತ ಸದಸ್ಯರ ರಾಜ್ಯಮಟ್ಟದ ಸಭೆಯನ್ನು ಗದಗ ನಗರದ ಡಾ. ಬಾಬಾಸಾಹೇಬ ಅಂಬೇಡ್ಕರ ಭವನದಲ್ಲಿ ಆಯೋಜಿಸಲಾಗಿತ್ತು.

ರಾಜ್ಯದಲ್ಲಿ 14,70,032 ಸದಸ್ಯರಿದ್ದು, ಶೀಘ್ರದಲ್ಲಿ ರಾಜ್ಯಾದ್ಯಂತ ಸರ್ವ ಸದಸ್ಯರ ನಿಯೋಗ ರಚಿಸಿ, ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಚರ್ಚೆ ನಡೆಸುವಂತೆ ಹಾಗೂ ಸಮೃದ್ಧ ಜೀವನ ಸೊಸೈಟಿಯ ಎಂ.ಡಿ ಮಹೇಶ ಮೋತೆವಾರ್ ಅವರ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸೊಸೈಟಿಯ ಸದಸ್ಯರಾದ ಎಸ್.ಪಿ. ಬಳ್ಳಾರಿ, ಪ್ರಮೋದ ಕುಲಕರ್ಣಿ, ಚಂದ್ರಪ್ಪ ಕೆ., ಮಕಾನದಾರ, ನಾಗರಾಜ ಮರಸ್ಕರ, ಸುಮಾ ನಾಯಕ, ಅಣ್ಣಪ್ಪ ನಾಯ್ಕರ, ಪಿ.ಟಿ. ನಾಯ್ಕ, ಎಸ್.ಬಿ. ಜಾಡದ, ಗಂಗಣ್ಣ ಕೆ., ಚಾಂದ ಸರ್, ಚಮನ್ ಶರೀಫ, ಮಲ್ಲಿಕಾರ್ಜುನ, ದೇವರಡ್ಡಿ, ನಾವಳ್ಳಿ, ಬಸವರಾಜ ಮರದ, ದೇವರಾಜ್, ಕೆ. ನಿಂಗಪ್ಪ, ಅನಿಲ ಪೋದ್ದಾರ, ವಸಂತ ಸಿದ್ದಮ್ಮನಳ್ಳಿ, ಶರಣಪ್ಪ ಬಿನ್ನಾಳ, ರಾಚಪ್ಪ ಸುಸರ್ಬಿ, ನಾಗನಗೌಡ ಪಾಟೀಲ, ಎಸ್.ಡಿ. ಪಾಟೀಲ, ರಗಟಿ, ವಿಜಯಲಕ್ಷ್ಮೀ, ಪಾಟೀಲ, ಕುಮಾರ ನಾಗರಾಜ, ಉದು, ಚೇತನ ಕೊತಬಾಳ ಸೇರಿದಂತೆ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

## ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಕುರಡಗಿ ಗ್ರಾಮದಲ್ಲಿ ಗ್ರಾ.ಪಂ, ರೋಣ ವೆಡ್ಸ್ ಸಂಸ್ಥೆ, ಪಶು ಇಲಾಖೆಯ ಸಹಯೋಗದೊಂದಿಗೆ ಗದಗ ರಿಲಯನ್ಸ್ ಫೌಂಡೇಶನ್ ವತಿಯಿಂದ ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಡ.ಸ. ಹಡಗಲಿಯ ಪಶು ವೈದ್ಯಾಧಿಕಾರಿ ಸಂತೋಷ ಕುಂದರಗಿ ಮಾತನಾಡಿ, ಗ್ರಾಮೀಣ ಪ್ರದೇಶದ ರೈತರ ಜೀವನಾಡಿಯಾಗಿರುವ ಜಾನುವಾರುಗಳಿಗಾಗಿ ಏರ್ಪಡಿಸುವ ಉಚಿತ ಪಶು ಆರೋಗ್ಯ ತಪಾಸಣಾ ಶಿಬಿರಗಳ ಸದುಪಯೋಗ ಪಡೆದುಕೊಳ್ಳಬೇಕು. ಜಾನುವಾರುಗಳ ಆರೈಕೆ ಬಗ್ಗೆ ರೈತರು ನಿರ್ಲಕ್ಷ್ಯ ತೋರಬಾರದು. ಹತ್ತಿರದ ಆಸ್ಪತ್ರೆಯಲ್ಲಿ ಕಾಲಕಾಲಕ್ಕೆ ಚಿಕಿತ್ಸೆ ಕೊಡಿಸಬೇಕು ಎಂದರು.

ಈ ಶಿಬಿರದಲ್ಲಿ ಎತ್ತು, ಎಮ್ಮೆ, ಕುರಿ, ಕೋಳಿ, ಶ್ವಾನ ಸೇರಿದಂತೆ ನೂರಾರು ಜಾನುವಾರುಗಳಿಗೆ ಲಸಿಕೆ ಹಾಕಲಾಯಿತು. ಖನಿಜಾಂಶವುಳ್ಳ ಔಷಧಿಗಳನ್ನು ರೈತರಿಗೆ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷ ವೀರಪ್ಪ ರಾಮಣ್ಣವರು ವಹಿಸಿದ್ದರು.

ಗ್ರಾ.ಪಂ ಸದಸ್ಯ ಶೌಕತಅಲಿ ನದಾಫ್, ರಿಲಾಯನ್ಸ್ ಫೌಂಡೇಶನ್ ಮುಖ್ಯಸ್ಥ ಶಹಾಬುದ್ದೀನ್ ನರೇಗಲ್ಲ, ಪಶು ಸಖಿ ಬಸಮ್ಮ ಅಯ್ಯನಗೌಡ್ರ, ಕೃಷಿ ಸಖಿ ಚೈತ್ರ ಅಯ್ಯನಗೌಡ್ರ, ಯಲ್ಲಪ್ಪ ರಿತ್ತಿ, ಸಿದ್ದು ಹಿರೇಗೌಡ್ರು, ರಘುನಾಥ್ ಜಾಧವ್, ಸಂಗಪ್ಪ ರಾಮಣ್ಣವರ, ನೇತಾಜಿ ಜಾಧವ್, ಸಂಗನಗೌಡ ದೊಡ್ಡ ರುದ್ರಗೌಡ, ಯಲ್ಲಪ್ಪ ಕುರಿಯವರ್, ವೀರೇಶ್ ಕಲಹಾಳ್, ಗುರುಪಾದಪ್ಪ ಕುಂದಗೋಳ, ರಮ್ಜಾನ್ ಚೋಪಾದರ್, ಪ್ರಶಾಂತಕುಮಾರ್ ಕಾಡರ್, ಹನಮಪ್ಪ ಬೇವಿನಮರದ ಮುಂತಾದವರಿದ್ದರು.

## ಸಾಂಘಿಕ ಚಟುವಟಿಕೆಗಳ ಉದ್ಘಾಟನೆ ಇಂದು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಶ್ರೀ ಕೊಟ್ಟೂರುಸ್ವಾಮಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಬುಧವಾರ ಮುಂಜಾನೆ 10.30ಕ್ಕೆ 2023-24ನೇ ಸಾಲಿನ ವಿವಿಧ ಸಾಂಘಿಕ ಚಟುವಟಿಕೆಗಳ ಉದ್ಘಾಟನೆ ಹಾಗೂ ಐಟಿಐ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಜರುಗಲಿದೆ.

ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠದ ಮುಪ್ಪಿನ ಬಸಲಿಂಗ ಸ್ವಾಮೀಜಿಯವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಶ್ರೀ ಕೊಟ್ಟೂರುಸ್ವಾಮಿ ಐಟಿಐ ಚೇರಮನ್ ವಿ.ಬಿ. ಸೋಮನಕಟ್ಟಿಮಠ ವಹಿಸುವರು. ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿಯವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶ್ರೀ ಅನ್ನದಾನ ವಿಜಯ ಪ್ರೌಢಶಾಲೆಯ ಸದಸ್ಯ ನಿಂಗನಗೌಡ ಲಕ್ಕನಗೌಡ ಪೂಜ್ಯರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವರು.

ಮುಖ್ಯ ಅತಿಥಿಗಳಾಗಿ ಎಸ್.ವಿವಿಪಿ ಸಮಿತಿಯ ಆಡಳಿತಾಧಿಕಾರಿ ಎನ್.ಆರ್. ಗೌಡರ, ಹುಬ್ಬಳ್ಳಿಯ ಜಿಲ್ಲಾ ನೋಡಲ್ ಅಧಿಕಾರಿ ಮಲ್ಲೂರ ಬಸವರಾಜ, ನರೇಗಲ್ಲ ಶ್ರೀ ಕೊಟ್ಟೂರು ಐಟಿಐ ಸಂಸ್ಥೆಯ ಸದಸ್ಯರಾದ ವೀರಣ್ಣ ಹಳ್ಳಿ, ಶಿವಯ್ಯ ಚಕ್ಕಡಿಮಠ, ಹನಮಪ್ಪ ಕೊಪ್ಪದ, ಗಜೇಂದ್ರಗಡ ಶ್ರೀ ಅನ್ನದಾನೇಶ್ವರ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಅಮರೇಶ ಗಾಣಿಗೇರ ಭಾಗವಹಿಸಲಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಜೋಳದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಂಬಳ ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಗ್ರಾಮೀಣ ಉದ್ಯೋಗ ಮೇಳ

## ವಿದ್ಯಾರ್ಥಿಗಳು ಕೌಶಲ್ಯ ಬೆಳೆಸಿಕೊಳ್ಳಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಮೀಣ ಭಾಗದಲ್ಲಿ ಉದ್ಯೋಗ ಮೇಳ ಆಯೋಜಿಸುವ ಮೂಲಕ ಶಿವಸಂಕೇತ ಫೌಂಡೇಶನ್ ಹಾಗೂ ಕನೆಕ್ಟ್ ಸಂಸ್ಥೆ ಗ್ರಾಮೀಣ್ಭಗದ ಯುವಕರಿಗೆ ಉತ್ತಮ ವೇದಿಕೆ ಕಲ್ಪಿಸಿದೆ ಎಂದು ತೋಂಟ-ದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟಿ ಹೇಳಿದರು.

ಅವರು ಡಂಬಳ ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶಿವಸಂಕೇತ ಫೌಂಡೇಶನ್ ಗದಗ, ಕನೆಕ್ಟ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಉದ್ಯೋಗ ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಗಳು ಕೂಡಾ ಕೌಶಲ್ಯ ಬೆಳೆಸಿಕೊಳ್ಳಬೇಕು. ಅದಕ್ಕಾಗಿ ಬೇಕಾಗುವ ಪ್ರಾವೀಣ್ಯತೆ ಮೈಗೂಡಿಸಿಕೊಂಡಾಗ ಬದುಕು ಬದಲಾಗಲು ಸಾಧ್ಯವಾಗುತ್ತದೆ. ಕಲಿಯುವುದು ಎಷ್ಟು ಮುಖ್ಯವೋ, ಕಲಿತ ನಂತರ ಸಿಗುವ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿಕೊಂಡು




ಹೋಗುವುದು ಕೂಡ ಅಷ್ಟೇ ಮುಖ್ಯವಾಗಿತ್ತದೆ. ಪ್ರಸ್ತುತ ದಿನಗಳಲ್ಲಿ ಬದುಕು ವ್ಯಾಪಕವಾಗಿ ಬದಲಾಗುತ್ತಿದೆ. ಅದಕ್ಕೆ ಇಂದಿನ ಯುವಕರು ಒಗ್ಗಿಕೊಂಡು ಕೆಲಸ ಮಾಡಬೇಕು. ಕಾಲೇಜು ಅವಧಿಯಲ್ಲಿಯೇ ಜೀವನದ ಮಾರ್ಗದರ್ಶನ ಕೂಡಾ ಮುಖ್ಯವಾಗುತ್ತದೆ. ಅದನ್ನು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಸಿಬ್ಬಂದಿಗಳು ಮಕ್ಕಳಿಗೆ ನೀಡುತ್ತಿದ್ದಾರೆ ಎಂದರು.

ಗ್ರಾಮೀಣ ಮಟ್ಟದಲ್ಲಿಯೂ ಉದ್ಯೋಗ ಮೇಳ ಆಯೋಜಿಸಿರುವುದು ಸ್ವಾಗತಾರ್ಹ ಕಾರ್ಯವಾಗಿದೆ. ವಿದ್ಯಾರ್ಥಿಗಳು ಸರ್ಕಾರಿ ನೌಕರಿಗಳ ಬಗ್ಗೆ ಕಾಯುತ್ತಾ ಕುಳಿತುಕೊಳ್ಳದೇ ಖಾಸಗಿ ಕಂಪನಿಗಳಲ್ಲಿ ಸಿಗುವ ಕೆಲಸಗಳ ಮೂಲಕ ಬದುಕು ಕಟ್ಟಿಕೊಳ್ಳಬಹುದು ಎಂದರು.

ಶಿವಸಂಕೇತ ಫೌಂಡೇಶನ್ ಅಧ್ಯಕ್ಷೆ ಮಂಜುಳಾ ಕುಷ್ಟಗಿ ಕಾರ್ಯಕ್ರಮ ಉದ್ಘಾಟಿಸಿದರು. ಡಂಬಳ ಮಠದ ವ್ಯವಸ್ಥಾಪಕ ಜಿ.ವಿ. ಹಿರೇಮಠ, ಪ್ರಾಚಾರ್ಯ ಎಸ್.ಎಂ. ಶಿವರಾಚಯ್ಯ, ಜಿ. ಮಹೇಶಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.


ಡಿಎಂಇ ತರಬೇತಿ ಕೇಂದ್ರದ ಸಿಬ್ಬಂದಿಗಳು ಪ್ರಾರ್ಥಿಸಿದರು. ರಮೇಶ ಕೊರ್ಲಹಳ್ಳಿ ನಿರೂಪಿಸಿದರು. ಶಿವಸಂಕೇತ ಫೌಂಡೇಶನ್‌ನ ಮಂಜುನಾಥ ಬ್ಯಾಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತರಬೇತಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕನೆಕ್ಟ್ ಸಂಸ್ಥೆಯ ನಿರ್ದೇಶಕ ಸಹದೇವ ಚಾಲೋಜಿ ಸೇರಿದಂತೆ ಅತಿಥಿಗಳು ಸಾಂದರ್ಭಿಕವಾಗಿ ಮಾತನಾಡಿದರು. ಟೊಯೋಟಾ ಕೌಶಲ್ಯ ಟ್ರೈನಿಂಗ್ ಬಿಡಿದಿ, ಕಾಡಿ ಮ್ಯಾನಿಫ್ಯಾಕ್ಚರ್ ಪ್ರೈ. ಲಿ-ಬೆಂಗಳೂರು, ಸಾಯಿ ಎಂಟರ್‌ಪ್ರೈಸಸ್, ನವಭಾರತ ಫರ್ಟಿಲೈಸರ್ಸ್, ರೈಟರ್ ಕಾರ್ಪ ಬಿಜಿನೆಸ್ ಪ್ರೈ. ಲಿ, ಕರಾವಳಿ ಟೀಚರ್ಸ್ ಹೆಲ್ಪ್‌ಲೈನ್, ಶೈನ್ ಹೆಲ್ತ್ ಕೇರ್, ಆಪ್ಟಿಮಮ್ ಮ್ಯಾನ್ ಪಾವರ್ ಸರ್ವಿಸ್ ಸಂಸ್ಥೆಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದರು. ಒಟ್ಟು 80 ಉದ್ಯೋಗ ಆಕಾಂಕ್ಷಿಗಳು ಹೆಸರು ನೋಂದಾಯಿಸಿಕೊಂಡಿದ್ದರು.

## ಶ್ರೀ ದ್ಯಾಮವ್ವದೇವಿ 6ನೇ ಜಾತ್ರಾ ಮಹೋತ್ಸವ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ಗ್ರಾಮದೇವತೆ ಶ್ರೀ ದ್ಯಾಮವ್ವದೇವಿಯ ಜಾತ್ರೆಯು ಪ್ರತಿ 3ವರ್ಷಕ್ಕೊಮ್ಮೆ ನಡೆ-ಯುತ್ತಿದ್ದು, ಜ.22ರಿಂದ 6ನೇ ಜಾತ್ರಾಮಹೋತ್ಸವ ಪ್ರಾರಂಭವಾಗಿದೆ. ಜ.23 ಮತ್ತು ಜ.24ರಂದು ಬೆಳಿಗ್ಗೆ 6.35ರಿಂದ ಸಂಜೆಯವರಿಗೆ 2 ದಿನಗಳ ಕಾಲ ಶ್ರೀ ದೇವಿಯ ಗ್ರಾಮ ಸಂಚಾರ, ಜ.25ರಂದು ಬನದ ಹುಣ್ಣಿಮೆಯ ದಿನವಾದ ಗುರುವಾರ ಬೆಳಿಗ್ಗೆ 6ಗಂಟೆಗೆ ಶ್ರೀದೇವಿಗೆ ಉಡಿ ತುಂಬುವುದು,



6.15ಕ್ಕೆ ಶ್ರೀ ದುರ್ಗಾ ಹೋಮ, 7 ಗಂಟೆಗೆ ವೀರಗಾಸೆ ತಂಡದ ಸೇವೆ ನಂತರ ಸಕಲ ವಾದ್ಯ ವೈಭವಗಳೊಂದಿಗೆ ಮೆರವಣಿಗೆ ಮುಖಾಂತರ ಚೌತಮನೆ ಕಟ್ಟೆಯಿಂದ ಶ್ರೀದೇವಿಯ ದೇವಸ್ಥಾನಕ್ಕೆ ಕರೆತರುವುದು ಮಧ್ಯಾಹ್ನ 1ಗಂಟೆಗೆ ಅನ್ನ ಸಂತರ್ಪಣೆ ನೆರವೇರಲಿದೆ.

ಸಂಜೆ 5.30ಕ್ಕೆ ಶ್ರೀದೇವಿಯ ಗುಡಿ ತುಂಬಿಸುವುದು ಹಾಗೂ ಮಹಾಮಂಗಳಾರತಿ ಕಾರ್ಯಕ್ರಮ ನಡೆಯಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಜಾತ್ರಾ ಕಮಿಟಿ ಹಾಗೂ ಶ್ರೀ ಗ್ರಾಮದೇವತಾ ಅರ್ಚಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಮಾಡಳ್ಳಿ ಗ್ರಾಮದಲ್ಲಿ ಸೋಮವಾರ ಅಯೋಧ್ಯಾ ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಘಳಿಗೆಯ ಸಂಭ್ರಮಾಚರಣೆ ಸಂದರ್ಭದಲ್ಲಿ ಗ್ರಾಮದ ಸ್ನೇಹಲೋಕ ಯುವಕ ಮಂಡಳದಿಂದ ವಿಶೇಷ ಪೂಜೆ, ಪ್ರಸಾದ ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು. ಮಕ್ಕಳು ಶ್ರೀರಾಮ-ಸೀತೆ, ಲಕ್ಷ್ಮಣ, ಹನಮಂತನ ವೇಷಭೂಷಣದಲ್ಲಿ ಮಿಂಚಿದರು.

### 'ಮನೆ ಕನ್ನಡ -ಮನ ಕನ್ನಡ' ಕಾರ್ಯಕ್ರಮದಲ್ಲಿ ಅಂಬಿಗರ ಚೌಡಯ್ಯನವರ ಕುರಿತು ಉಪನ್ಯಾಸ

## ಚೌಡಯ್ಯನವರ ತತ್ವಾದರ್ಶಗಳು ದಾರಿದೀಪ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಭವ ಸಾಗರ ದಾಟಿಸುವ ನಾವಿಕ, ನಿಜ ಶರಣ ಅಂಬಿಗರ ಚೌಡಯ್ಯನವರು ಬಾನಂಗಳದಲ್ಲಿ ಪ್ರಜ್ವಲಿಸಿದ ನಕ್ಷತ್ರವೇ ಆಗಿದ್ದಾರೆ. ನೇರ ನುಡಿ, ವಚನಗಳ ಮೂಲಕ ಸಮಾಜದಲ್ಲಿನ ಅಜ್ಞಾನ, ಅಂಧಕಾರ, ಅಸಮಾನತೆ, ಮೂಢನಂಬಿಕೆ ಹೋಗಲಾಡಿಸುವ ದಿಟ್ಟ ನಿಲುವು ತೋರಿದ ಚೌಡಯ್ಯನವರ ತತ್ವಾದರ್ಶ, ಚಿಂತನೆ, ಮೌಲ್ಯಗಳು ಸಮಾಜಕ್ಕೆ ದಾರಿದೀಪ ಎಂದು ರಾಣಿ ಚನ್ನಮ್ಮ ವಸತಿ ಶಾಲೆಯ ಪ್ರಾಚಾರ್ಯ ನಾಗರಾಜ ಕಳಸಾಪುರ ಹೇಳಿದರು.

ಅವರು ಕಸಾಪ ತಾಲೂಕು ಘಟಕದಿಂದ ಉಪನ್ಯಾಸಕ ರಮೇಶ ರಿತ್ತಿ ಇವರ ಮನೆಯಲ್ಲಿ ಜರುಗಿದ 'ಮನೆ ಕನ್ನಡ -ಮನ ಕನ್ನಡ' ಸರಣಿಯ ಕಾರ್ಯಕ್ರಮದಲ್ಲಿ ಅಂಬಿಗರ ಚೌಡಯ್ಯನವರ ಕುರಿತು ಉಪನ್ಯಾಸ ನೀಡಿದರು.




ಸಂತರು, ಶರಣರು, ವಚನಕಾರರು ಮಾನವ ಕುಲಕೋಟಿಗೆ ಬದುಕಿನ ಸನ್ಮಾರ್ಗ ತೋರಿದ್ದಾರೆ ಮತ್ತು ಸುಸಂಸ್ಕೃತ ಬದುಕಿಗಾಗಿ ಕಾಯಕನಿಷ್ಠೆ ಕಲಿಸಿದ್ದಾರೆ. ಇಂತಹ ಮಹಾತ್ಮರನ್ನು ಕೇವಲ ಒಂದು ಜಾತಿ-ಜನಾಂಗಕ್ಕೆ ಸೀಮಿತಗೊಳಿಸಬಾರದು. ಅವರ ಜಯಂತಿ ಆಚರಣೆ, ಸ್ಮರಣೆ ಜತೆಗೆ ಅವರು ಸಮಾಜಕ್ಕೆ ತೋರಿದ ಮಾರ್ಗ, ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಪುರಸಭಾ ಮಹಾವಿದ್ಯಾಲಯದ ಕನ್ನಡ ಉಪನ್ಯಾಸಕ ಎಸ್.ಪಿ. ಚಲವಾದಿ, ಗಂಗಾಮತ ಸಮಾಜ ಅಧ್ಯಕ್ಷ ಬಸವರಾಜ ಜಾಲಗಾರ ಮಾತನಾಡಿದರು. ಪ್ರೊ. ಆರ್.ಬಿ. ಬನ್ನೂರ, ಎನ್.ಎಸ್. ಸೂರಣಗಿ, ಎಸ್.ಎಫ್. ಆದಿ, ಜೆ.ವಿ. ಅರಳಿಕಟ್ಟಿ, ಶೈಲಾ ಆದಿ, ವಿ.ವಿ ಗೊಲ್ಲರ, ಆರ್.ಎಫ್. ದೊಡ್ಡಮನಿ, ಬಿ.ಎಚ್. ನಡುವಿನಮನಿ, ಎಸ್.ಎಫ್. ಸುಣಗಾರ ಹಾಗೂ ಸಾಹಿತ್ಯಾಭಿಮಾನಿಗಳು ಉಪಸ್ಥಿತರಿದ್ದರು.

ಭಾವನಾ ರಮೇಶ ರಿತ್ತಿ ಚೌಡಯ್ಯನವರ ವಚನ ಪ್ರಸ್ತುತಪಡಿಸಿದಳು. ಶೈಲಜಾ ರಮೇಶ ರಿತ್ತಿ, ಮಂಜುನಾಥ ಚಾಕಲಬ್ಬಿ ನಾಗರಾಜ ಮಜ್ಜಿಗುಡ್ಡ, ಪಿ.ಎಚ್. ಕೊಂಡಾಬಿಂಗಿ, ಎಸ್.ಬಿ. ಅಣ್ಣಿಗೇರಿ ನಿರೂಪಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾಧ್ಯಕ್ಷ, ಉಪನ್ಯಾಸಕ ರಮೇಶ ರಿತ್ತಿ ಮಾತನಾಡಿ, ಬಸವಾದಿ ಶಿವ ಶರಣರಲ್ಲಿ ಅಪ್ರತಿಮನಾಗಿ ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳು ಸಾರ್ವಕಾಲಿಕ ಎಂದರು. ಹಿರಿಯ ಸಾಂಸ್ಕೃತಿಕ ಚಿಂತಕರಾದ ಸರೋಜಕ್ಕ ಬನ್ನೂರು, ಕಠೋರ ಪದಗಳ ಮೂಲಕ ಸಮಾಜದ ಅನಿಷ್ಟಗಳನ್ನು ಖಂಡಿಸುತ್ತಿದ್ದ ಅವರ ಒಂದೊಂದು ವಚನಗಳು ಎಲ್ಲರ ಮತಿಯನ್ನು ಜಾಗೃತಗೊಳಿಸುತ್ತವೆ ಎಂದರು.

## ಪಾಂಡುರಂಗ ದೇವಸ್ಥಾನದಲ್ಲಿ ದೀಪೋತ್ಸವ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಯೋಧ್ಯಾ ರಾಮ ಜನ್ಮಭೂಮಿಯ 500 ವರ್ಷಗಳ ವನವಾಸ ಅಂತ್ಯವಾಗಿ ಪ್ರಭು ಶ್ರೀರಾಮಚಂದ್ರ ಮೂರ್ತಿ ಪ್ರತಿಷ್ಠಾಪನೆಗೊಂಡಿರುವ ಅಮೃತ ಘಳಿಗೆಗೆ ನಾವೆಲ್ಲರೂ ಸಾಕ್ಷಿಯಾಗಿರುವುದು ನಮ್ಮ ಭಾಗ್ಯವಾಗಿದೆ ಎಂದು ಎಸ್‌ಎಸ್‌ಕೆ ಸಮಾಜದ ಉಪಾಧ್ಯಕ್ಷ ನಾರಾಯಣಸಾ ಪವಾರ ಹೇಳಿದರು.

ಅವರು ಸೋಮವಾರ ಪಟ್ಟಣದ ಪಾಂಡುರಂಗ ದೇವಸ್ಥಾನದಲ್ಲಿ ಭಾವಸಾರ ಕ್ಷತ್ರಿಯ ಸಮಾಜ ಬಾಂಧವರು ಅಯೋಧ್ಯೆಯ ಶ್ರೀರಾಮಚಂದ್ರ ಮೂರ್ತಿಯ ಪ್ರತಿಷ್ಠಾಪನೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದ ಬಳಿಕ ಸಂಜೆ ನಡೆದ ದೀಪೋತ್ಸವ



ಕಾರ್ಯಕ್ರಮದಲ್ಲಿ ಮಾತನಾಡಿ, 1992ರಲ್ಲಿ ಅಯೋಧ್ಯೆಯಲ್ಲಿ ಕರಸೇವೆಯನ್ನು ಮಾಡಿದ ಶಿರಹಟ್ಟಿಯ ಹಿರಿಯರಾದ ಶಶಿಧರ ರಾನಡೆ ಮತ್ತು ಲಕ್ಷ್ಮೇಶ್ವರದ ಭರಮಣ್ಣ ಗುಡಗೇರಿ ಅವರನ್ನು ಸತ್ಕರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇಂದು ನಾವು ಅಯೋಧ್ಯೆಯ ಸಂಭ್ರಮವನ್ನಾಚರಿಸುತ್ತಿರಲು ಇಂತಹ ಲಕ್ಷಾಂತರ ಕರಸೇವಕರ ಸೇವೆ ಕಾರಣವಾಗಿದೆ ಎಂದರು.

ಭಾವಸಾರ ಕ್ಷತ್ರಿಯ ಸಮಾಜದಿಂದ ಶ್ರೀಪಾಂಡುರಂಗ ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ ನೆರವೇರಿತು. ಸತೀಶ ಮಾಂಡ್ರೆ ವ್ಯಾಸಪೀಠ ನೇತೃತ್ವದಲ್ಲಿ ಶ್ರೀಜ್ಞಾನೇಶ್ವರಿ ಸಾಮೂದಾಯಿಕ ಪಾರಾಣಯಣ, ಭಜನೆ ಕಾರ್ಯಕ್ರಮಗಳು ನಡೆದವು. ಶಶಿಧರ ರಾನಡೆ ದಂಪತಿಗಳು ಹಾಗೂ ಭರಮಣ್ಣ ಗುಡಗೇರಿ ಅವರನ್ನು ಗೌರವಿಸಲಾಯಿತು.

ಬಸವರಾಜ ಮೆಣಸಿನಕಾಯಿ, ಡಿ.ಎಂ. ಪೂಜಾರ, ಸಮಾಜದ ಮುಖಂಡರಾದ ಪುಂಡಲೀಕರಾವ ಮಾತಾಡೆ, ಫಕ್ಕೀರಪ್ಪ ಬೋಮಲೆ, ಕಿರಣ ನವಲೆ, ಸಂತೋಷ ಸರ್ವದೆ, ಪ್ರವೀಣ ಬೋಮಲೆ, ಪ್ರಭಾಕರ ಬೋಮಲೆ, ಸಂತೋಷ ಬೋಮಲೆ, ಪ್ರವೀಣ ಮಾತಾಡೆ, ಶಂಕರ ಹವಳೆ, ಸೋಪಾನ ತಾಂದಳೆ, ರವಿ ಬೋಮಲೆ, ಆಕಾಶ ಕಪಟಕರ, ಖಂಡೋಬಾ ನವಲೆ, ನಟರಾಜ ರಾನಡೆ, ಸಂಜಯ ಮಾಂಡ್ರೆ, ಖಂಡೋಬಾ ನವಲೆ ಮುಂತಾದವರಿದ್ದರು.

## ಬಸವೇಶ್ವರ ಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಶ್ರೀ ಬಸವೇಶ್ವರ ಸಿ.ಬಿ.ಎಸ್.ಇ ಶಾಲೆಯಲ್ಲಿ 2023-24ನೇ ಸಾಲಿನ ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆಯನ್ನು ಎಸ್.ಎ.ವಿ.ವಿ.ಪಿ ಸಮಿತಿಯ ಆಡಳಿತಾಧಿಕಾರಿ ಎನ್.ಆರ್. ಗೌಡರ್ ಹಾಗೂ ಕೆ.ವಿ.ಜಿ.ಬಿ ಉಚಿತ ಪ್ರಸಾದ ನಿಲಯದ ಚೇರ್ಮನ್ ಮಲ್ಲಿಕಾರ್ಜುನಪ್ಪ ಮೆಣಸಗಿ ನೆರವೇರಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಚೇರಮನ್ ರವೀಂದ್ರನಾಥ ದೊಡ್ಡಮೇಟಿ, ಡಾ. ಜಿ.ಕೆ. ಕಾಳೆ, ಪ್ರಾಚಾರ್ಯ ಬಿ.ಎಚ್. ಬಂಡಿಹಾಳ, ದೈಹಿಕ ಶಿಕ್ಷಕ ಜಗದೀಶ ಹಾಳಕೇರಿ ಉಪಸ್ಥಿತರಿದ್ದರು.

ಈ ವೇಳೆಯಲ್ಲಿ ಶಿಕ್ಷಕ ವೃಂದದ ಕುಮಾರ ಮಲ್ಲಾಪೂರ, ಶರಣು ಬಳಗೋಡ, ವೀರೇಶ ಕಿನ್ನಾಳಮಠ, ಬಾಬು ಮಡಿವಾಳರ, ಕವಿತಾ ಗುರುವಡೆಯರ, ತಸ್ಲೀಮಾ ಸಿದ್ದಿಕ್, ಯಲ್ಲಕ್ಕ ಯಂಡಿಗೇರಿ, ಶಾರದಾ ಮುಶಿಗೇರಿ, ವಿಶಾಲಾಕ್ಷಿ ಎಳ್ಳರೊಟ್ಟಿ ಸೇರಿದಂತೆ ಸಿಬ್ಬಂದಿ ವರ್ಗದವರು, ಮಕ್ಕಳು ಇದ್ದರು.

## ರಾಮ ಮಂದಿರ ಭಾರತದ ಭವ್ಯ ಪರಂಪರೆಯ ಪ್ರತೀಕ

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ನಿರ್ಮಾಣವಾದ ಶ್ರೀರಾಮ ಮಂದಿರವು ಆಧುನಿಕ ಭಾರತಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆ ಎಂದು ಹುಬ್ಬಳ್ಳಿಯ ಸನಾತನ ಸಂಸ್ಥೆಯ ಸಾಧಕಿ ಸೌ.ವಿದುಲಾ ಹಳದೀಪುರ ಪ್ರಶಂಸಿಸಿದರು.

ಅವರು ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಶ್ರೀರಾಮ ಚರಿತಂ ಕಥಾ ಕೀರ್ತನ, ಸಾಧಕರಿಗೆ ಸನ್ಮಾನ ಕಾರ್ಯಕ್ರವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತವಲ್ಲದೆ ಸಮುದ್ರದ ಆಚೆಯಲ್ಲಿಯ ಮನೆ-ಮನಗಳಲ್ಲೂ ರಾಮನಾಮ ಜಪ, ಶ್ರೀರಾಮೋತ್ಸವ ನಡೆದಿದ್ದು ನಿಜಕ್ಕೂ ಭಾರತದ ಸನಾತನ ವಿಶೇಷತೆಯನ್ನು ಅರ್ಥ ಮಾಡಿಸುತ್ತಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಬಿ.ಪ್ರಸನ್ನಕುಮಾರ ಮಾತನಾಡಿ, ಅಯೋಧ್ಯೆಯಲ್ಲಿ ಸ್ಥಾಪಿತ ಶ್ರೀರಾಮ ಮಂದಿರವು




ಭಾರತದ ಭವ್ಯ ಪರಂಪರೆಯ ಪ್ರತೀಕವಾಗಿದೆ ಎಂದರು.

ವೇದಿಕೆಯ ಮೇಲೆ ನಗರಸಭಾ ಸದಸ್ಯೆ ವಿಜಯಲಕ್ಷ್ಮೀ ದಿಂಡೂರ, ವೈದ್ಯೆ ಡಾ.ರಾಧಿಕಾ ಕುಲಕರ್ಣಿ, ಸಮಾಜ ಸೇವಕಿ ರಾಣಿ ಚಂದಾವರಿ, ನ್ಯಾಯವಾದಿ ಪ್ರಭಾಕುಮಾರಿ ಬಿ.ಎಂ., ವಾಣಿ ಭಟ್, ಸೋನಲ್ ವೋರಾ ಕಾರ್ಯದರ್ಶಿ ಯೋಗೇಶ ವೋರಾ, ಕೋಶಾಧ್ಯಕ್ಷ ಬಿ.ಪ್ರದೀಪಕುಮಾರ, ಸಿದ್ಲಿಂಗೇಶ ಕಾಳಗಿ ಉಪಸ್ಥಿತರಿದ್ದರು.

ಆರಂಭದಲ್ಲಿ ವೇ.ಮೂ. ಕೆ.ವಿ. ಭಟ್, ಗಣಪತಿ ಗಾಂವಕರ, ಜಗದೀಶ ಅಡಿಗ ಮುಂತಾದವರಿಂದ ವೇದಘೋಷ ನಡೆಯಿತು. ಪತ್ರಕರ್ತ ಅನಂತ ಎಸ್.ಕಾರ್ಕಳ ನಿರೂಪಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಶೈಲ ಬಿಳೆಯಲ್ಲಿ ವಂದಿಸಿದರು. ಹಿಂದೂಸ್ಥಾನಿ ಗಾಯಕರಾದ ಪಾರ್ವತಿ ಮಾಳೆಕೊಪ್ಪಮಠ, ಉಷಾ ಕಾರಂತ, ವೆಂಕಟೇಶ ಕುಲಕರ್ಣಿ ಸಂಗಡಿಗರಿಂದ ಸುಗಮ ಸಂಗೀತ ಜರುಗಿತು.

ದತ್ತಾತ್ರೇಯ ಕಲಬುರ್ಗಿಯವರು ತಬಲಾ ಕಾರ್ಯಕ್ರಮ ಜನಮನ ಸೂರೆಗೊಂಡವು. ಗೌರಿ ಶಿರಹಟ್ಟಿ ಭಗವದ್ಗೀತಾ ಪಠಣ, ಶೀತಲ್‌ರಿಂದ ಭರತನಾಟ್ಯ, ಎಸ್.ವೈ. ಕ್ಲಾಸಿಕಲ್ ಡ್ಯಾನ್ ಗ್ರುಪ್ ಮಕ್ಕಳಿಂದ ಡ್ಯಾನ್ಸ್ ಮುಂತಾದ ಕಾರ್ಯಕ್ರಮಗಳು ಜರುಗಿದವು.

## ಜನರ ರಕ್ಷಣೆಯೇ ನಮ್ಮ ಗುರಿ

▶▶ಮೊದಲನೇ ಪುಟದಿಂದ

ಕಾನೂನನ್ನು ಗೌರವಿಸುವ ಜನರೊಂದಿಗೆ ಕಾನೂನು ಸಹ ಇರುತ್ತದೆ ಎಂದ ಅವರು, ನಾಗರಿಕ ಸಮಾಜಕ್ಕೆ ತೊಂದರೆ ಕೊಡುವವರ ವಿರುದ್ಧ ಪೊಲೀಸ್ ಇಲಾಖೆಯ ಜೊತೆಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಮೀಸಲು ಪಡೆಗಳು ಸನ್ನದ್ಧವಾಗಿರುತ್ತವೆ ಎಂದರು.

ನಂತರ ಪೊಲೀಸ್ ಠಾಣೆಯಿಂದ ಬಸ್ ನಿಲ್ದಾಣ, ಮುಲ್ಲಾನ ಭಾವಿ ವೃತ್ತ, ಪೊತರಾಜನ ಕಟ್ಟೆ, ಸೂಡಿ ವೃತ್ತ, ಶಿವಾನಂದ ಮಠ, ಹೊರಪೇಟಿ ಸೇರಿದಂತೆ ಅನೇಕ ಕಡೆಗಳಲ್ಲಿ ಪಥಸಂಚಲನ ನಡೆಸಿ, ಜಾಗೃತಿ ಮೂಡಿಸಿದರು.

ಎ.ಸಿ. ರಾವ್, ಪ್ರದೀಪ್, ಸಿಪಿಐ ಎಸ್.ಎಸ್. ಬಿಳಗಿ, ಪಿಎಸ್‌ಐ ಎಲ್.ಕೆ. ಜೂಲಕಟ್ಟಿ ಸೇರಿದಂತೆ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅರ್ಹ ಮದರಸಾಗಳಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ವ್ಯಾಪ್ತಿಯಲ್ಲಿರುವ ಮದರಸಾಗಳಿಗೆ ಮದರಸಾಗಳ ಆಧುನೀಕರಣ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡುವ ಯೋಜನೆಯಡಿ ಒಂದು ಸಂಸ್ಥೆಗೆ ಒಂದು ಬಾರಿಗೆ ಗರಿಷ್ಠ 5.00 ಲಕ್ಷಗಳ ಅನುದಾನವನ್ನು ನೀಡುವ ಸಲುವಾಗಿ ಜಿಲ್ಲೆಯಲ್ಲಿರುವ ಮದರಸಾಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಮದರಸಾಗಳಲ್ಲಿ ವಿದ್ಯಾರ್ಥಿಗಳ ಔಪಚಾರಿಕ ಶಿಕ್ಷಣ, ಗಣಕಯಂತ್ರ ಶಿಕ್ಷಣ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಹಾಗೂ ಕುಡಿಯುವ ನೀರು, ಶೌಚಾಲಯ ಮತ್ತು ಪೀಠೋಪಕರಣಗಳ ಖರೀದಿಗೆ ಅನುದಾನವನ್ನು ಬಳಸಿಕೊಳ್ಳಬಹುದಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಜನವರಿ 31 ರವರೆಗೆ ವಿಸ್ತರಿಸಲಾಗಿದ್ದು, ಅರ್ಹ ಮದರಸಾ ಸಂಸ್ಥೆಯವರು https://dom.karnataka.gov.in ಈ ಲಿಂಕ್ ಮೂಲಕ 2023-24ನೇ ಸಾಲಿನಲ್ಲಿ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು ನೀಡಲು ಮದರಸಾ ಸಂಸ್ಥೆಗಳು ಕ್ಲಿಕ್ ಮಾಡಿ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೂ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ರವರ ಕಚೇರಿಗೆ ಸಲ್ಲಿಸಬೇಕೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ್ ಬಿದರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳ ಕಚೇರಿ, ಮೌಲಾನಾ ಆಜಾದ್ ಭವನ, ಜಿಲ್ಲಾ ನ್ಯಾಯಾಲಯದ ಎದುರುಗಡೆ, ಹುಬ್ಬಳ್ಳಿ ರಸ್ತೆ ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

### 'ಕೂಸಿನ ಮನೆ' ಆರೈಕೆದಾರರ ಮೂರು ದಿನಗಳ ತರಬೇತಿ ಕಾರ್ಯಾಗಾರದಲ್ಲಿ ರವಿ ಎ.ಎನ್

# ಮಕ್ಕಳ, ಮಹಿಳೆಯರ ಶ್ರೆಯೋಭಿವೃದ್ಧಿಯ ಯೋಜನೆ

■ ವಿಜಯಸಾಕ್ಷಿ ಸುದ್ದಿ, ರೋಣ

'ಕೂಸಿನ ಮನೆ' ಕಾರ್ಯಕ್ರಮ ನರೇಗಾ ಯೋಜನೆಯ ಒಂದು ಭಾಗವಾಗಿದ್ದು, ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗದ ಮಕ್ಕಳ ಲಾಲನೆ-ಪಾಲನೆಗೆ ರಾಜ್ಯ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಿಂದ ನೀವು ಗ್ರಾಮದ ಮಕ್ಕಳ ಲಾಲನೆ, ಪಾಲನೆ ಮಾಡುವ ಮೂಲಕ ಗ್ರಾಮದ ಮಕ್ಕಳಿಗೆ ತಾಯಿಯಾಗಿ ಕೆಲಸ ಮಾಡುವ ಸೌಭಾಗ್ಯ ನಿಮಗೆ ದೊರಕಿದೆ ಎಂದು ರೋಣ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ರವಿ ಎ.ಎನ್. ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಗುರು ಭವನದಲ್ಲಿ ತಾ.ಪಂ ವತಿಯಿಂದ ಆಯೋಜಿಸಿದ್ದ 'ಕೂಸಿನ ಮನೆ' ಆರೈಕೆದಾರರ ಮೂರು ದಿನಗಳ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೂಸಿನ ಮನೆ ಯೋಜನೆಯೂ ಮಹಿಳಾ ಸಬಲೀಕರಣ ಮಾಡುವ ದೃಷ್ಟಿಯಿಂದ ಆರಂಭವಾಗಿದ್ದು, ನಿಮ್ಮ ಗ್ರಾಮದ ಬಂಧುಗಳು, ನೆರೆಹೊರೆಯವರು, ಗ್ರಾಮಸ್ಥರು ಗ್ರಾಮದಲ್ಲಿ ದುಡಿಯಲು ಹೋದ ಸಂದರ್ಭದಲ್ಲಿ ತಾವು ಅವರ ಮಕ್ಕಳನ್ನು ಆರೈಕೆ ಮಾಡುವ ಕೆಲಸ ಮಾಡಬೇಕಾಗುತ್ತದೆ. ಕೂಲಿಕಾರರಿಗೂ,



ಆರೈಕೆದಾರರರಿಗೂ ನರೇಗಾ ಯೋಜನೆಯಡಿ ಸಮಾನ ವೇತನ ಬರುತ್ತದೆ ಎಂದರು.

ತಾವು ಲಾಲನೆ-ಪಾಲನೆ ಮಾಡುವ ಜೊತೆಗೆ ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರವನ್ನು ಕೊಟ್ಟು ಅವರನ್ನು ಆರೈಕೆ ಮಾಡಬೇಕು. ಇದರಿಂದಾಗಿ ಮಕ್ಕಳ ಪೌಷ್ಟಿಕಾಂಶದ ಕೊರತೆಯೂ ನೀಗುತ್ತದೆ ಎಂದರಲ್ಲದೆ, ಗ್ರಾಮೀಣ ಪ್ರದೇಶದ ಮಕ್ಕಳ ಹಾಗೂ ಮಹಿಳೆಯರ ಶ್ರೆಯೋಭಿವೃದ್ಧಿಯ ಉದ್ದೇಶದಿಂದ ರಾಜ್ಯ ಸರ್ಕಾರ 'ಕೂಸಿನ ಮನೆ' ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಪ್ರಾರಂಭದಲ್ಲಿ ತಾಲೂಕಿನಲ್ಲಿ 10 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೂಸಿನ ಮನೆ ಆರಂಭಿಸಿ, ಅದರ ಆರೈಕೆದಾರರಿಗೆ ಮೂರು ದಿನಗಳ ತರಬೇತಿಯನ್ನು ನೀಡುತ್ತಿರುವುದು ಸಂತೋಷದ ವಿಚಾರವೆಂದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ರಿಯಾಜ ಖತೀಬ್, ಸಹಾಯಕ ನಿರ್ದೇಶಕ (ಪಂಚಾಯತ ರಾಜ್)ಶಿವಯೋಗಿ ರಿತ್ತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರೋಣದ ಹಿರಿಯ ಮೇಲ್ವಿಚಾರಕರಾದ ಮಂಜುಳಾ ಗುರಾಣಿ, ಅಬ್ಬಿಗೇರಿ, ಹೊಸಳ್ಳಿ, ಕುರಹಟ್ಟಿ, ಕೌಜಗೇರಿ, ಬೆಳವಣಿಕಿ, ಹೊಳೆ ಆಲೂರು, ಹೊಳೆಮಣ್ಣೂರು ಗ್ರಾ.ಪಂ.ಗಳ ಕೂಸಿನ ಮನೆ ಆರೈಕೆದಾರರು ಭಾಗವಹಿದ್ದರು. ತಾ.ಪಂ ಐಇಸಿ ಕೋ-ಅರ್ಡಿನೇಟರ್ ಮಂಜುನಾಥ ನಿರೂಪಿಸಿ ವಂದಿಸಿದರು.

ಜಿಲ್ಲಾ ಐಇಸಿ ಸಂಯೋಜಕರಾದ ವೀರಭದ್ರಪ್ಪ ಸಜ್ಜನ ಮಾತನಾಡಿ, ಗದಗ ಜಿಲ್ಲೆಯಲ್ಲಿ ಒಟ್ಟು 109 ಕೂಸಿನ ಮನೆಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ. ಅದರಂತೆ ಮೊದಲ ಹಂತದಲ್ಲಿ 69 ಕೂಸಿನ ಮನೆಗಳನ್ನು ಜಿಲ್ಲೆಯಾದ್ಯಂತ ಆರಂಭಿಸಲಾಗುತ್ತಿದ್ದು, ರೋಣ ತಾಲೂಕಿನಲ್ಲಿ ಒಟ್ಟು 10 ಕೂಸಿನ ಮನೆಗಳನ್ನು ಅರಂಭಿಸಲಾಗುತ್ತಿದೆ ಎಂದು ತಿಳಿಸಿ, ಸರ್ಕಾರ ಜಾರಿಗೆ ತಂದಿರುವ ಕೂಸಿನ ಮನೆ ಕಾರ್ಯಕ್ರಮದ ಉದ್ದೇಶ ಹಾಗೂ ಮಹತ್ವದ ಬಗ್ಗೆ ಆರೈಕೆದಾರರಿಗೆ ಮಾಹಿತಿ ನೀಡಿದರು.

# ಬುಡಕಟ್ಟು ಜನಾಂಗದ ಅಧ್ಯಯನ ವಿಶಿಷ್ಟವಾದದು



■ ವಿಜಯಸಾಕ್ಷಿ ಸುದ್ದಿ, ಗದಗ

ಹಿಂದುಳಿದ ಬುಡಕಟ್ಟು ಜನಾಂಗದ ಅಧ್ಯಯನ ಮಾಡುವುದು, ಆ ಜನಾಂಗದ ಕುರಿತು ವಿಶೇಷ ಆಸಕ್ತಿಯಿಂದ ಅವರನ್ನು ಸಂದರ್ಶಿಸಿ ಅವರ ಬದುಕಿನ ಕುರಿತು ತಿಳಿದುಕೊಂಡು ದಾಖಲಿಸುವುದೆಂದರೆ, ಅದೊಂದು ಸಾಹಸ ಮತ್ತು ಸಾಧನೆಯಾಗಿದೆ. ಈ ಕಾರ್ಯವನ್ನು ಮಾಡಿ, ಮಹಾ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದಿರುವ ನೇತ್ರಾವತಿ ಶಿವಲಿಂಗಪ್ಪ ಅಂಗಡಿಯವರ ಕಾರ್ಯ ಅಭಿನಂದನೀಯ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಪರಮಶಿವಮೂರ್ತಿ ಹೇಳಿದರು.

ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ 32ನೇ ಘಟಿಕೋತ್ಸವದಲ್ಲಿ ಮಾತನಾಡಿ, ಸೆಟ್ಲಮೆಂಟ್‌ಗಳಲ್ಲಿ ವಾಸವಿರುವ ಅಲೆಮಾರಿ ಜನಾಂಗದವರನ್ನು ಭೇಟಿಯಾಗಿ ಅವರ ಬದುಕನ್ನು ಹತ್ತಿರದಿಂದ ಗಮನಿಸಿ, ಅಧ್ಯಯನ ನಡೆಸಿ, ದೀರ್ಘ ಪ್ರಬಂಧ ಮಂಡಿಸಿರುವುದನ್ನು ನೆನಪಿಸಿದರು. ನೇತ್ರಾವತಿ ಅಂಗಡಿಯವರಿಗೆ ಮಾರ್ಗದರ್ಶಕರಾಗಿದ್ದ ಡಾ. ಗಂಗಾಧರ ದೈವಜ್ಞ ಅವರ ಸೂಕ್ತವಾದ ಮಾರ್ಗದರ್ಶನ ಕೂಡ ಸಹಕಾರಿಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಡಾ. ಕೆ.ಸುಧಾಕರ ಡಾಕ್ಟರೇಟ್ ಪಡೆದ ಎಲ್ಲರನ್ನು ಅಭಿನಂದಿಸಿದರು.

ಸಮಾರಂಭದಲ್ಲಿ ಪ್ರಭಾತ ಕುಮಾರ ನಾರಾಯಣಪೂರ ಕುಟುಂಬದವರು, ವಿಭೂತಿ ಮಾಸಪತ್ರಿಕೆಯ ಸಂಪಾದಕ ಅಂದಾನಪ್ಪ ವಿಭೂತಿ, ಗದಗ ಜಿಲ್ಲಾ ಶಿವಸಿಂಪಿ ಸಮಾಜದ ಅಧ್ಯಕ್ಷ ಡಾ. ಸುರೇಶಬಾಬು ನಾರಾಯಣಪೂರ ಹಾಗೂ ಶಿವಲಿಂಗಪ್ಪ ಅಂಗಡಿ ಕುಟುಂಬದವರು ಉಪಸ್ಥಿತರಿದ್ದರು.

### ಸಿದ್ದಲಿಂಗನಗರ ಪ್ರೌಢಶಾಲೆಯ ಮಹಾದ್ವಾರ ಲೋಕಾರ್ಪಣೆಗೊಳಿಸಿದ ಎಂ.ಎ. ರಡ್ಡೇರ

# ದಾನ-ಧರ್ಮದಿಂದಲೇ ಮನುಷ್ಯನಿಗೆ ನೆಮ್ಮದಿ



■ ವಿಜಯಸಾಕ್ಷಿ ಸುದ್ದಿ, ಗದಗ

ಕೋಟ್ಯಾಂತರ ಜೀವಿಗಳಲ್ಲಿ ಶ್ರೇಷ್ಠ ಜನ್ಮ ಪಡೆದ ಮನುಷ್ಯ ತನ್ನ ಬದುಕಿನಲ್ಲಿ ದಾನ-ಧರ್ಮದಿಂದ ದೂರವಿರುವುದು ಸಾಮೂಹಿಕ ವಿನಾಶಕ್ಕೆ ಕಾರಣವಾಗುತ್ತದೆ. ದಾನವು ಕೆಡುಕನ್ನು ದೂರ ಮಾಡುವ ಸಾಧನವಾಗಿದ್ದು, ಪುಣ್ಯ ದ್ವಾರದ ಬೀಗದ ಕೈ ಇದ್ದ ಹಾಗೆ. ದಾನ-ಧರ್ಮ ಜೀವನದ ದೇವ ಮಾರ್ಗದ ಹಾದಿ ಎಂದು ಡಿಡಿಪಿಐ ಎಂ.ಎ. ರಡ್ಡೇರ ಅಭಿಪ್ರಾಯಪಟ್ಟರು.

ಅವರು ಇಲ್ಲಿನ ಸರ್ಕಾರಿ ಪ್ರೌಢಶಾಲೆ ಸಿದ್ದಲಿಂಗ ನಗರದಲ್ಲಿ ದಿ. ಗಂಗಾಧರ್ ವಿಠೋಬಾ ವರ್ಣೇಕರ್ ಕುಟುಂಬದವರ ಸಹಕಾರದಿಂದ ನಿರ್ಮಾಣಗೊಂಡ ಮಹಾದ್ವಾರದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ದಾನ-ಧರ್ಮದಿಂದ ಮನುಷ್ಯನಿಗೆ ಶಾಂತಿ-ನೆಮ್ಮದಿ ಸಿಗುತ್ತದೆ. ಇಂತಹ ಪುಣ್ಯದ ಕಾರ್ಯಕ್ಕೆ ಕೈ ಜೋಡಿಸಿದ ವರ್ಣೇಕರ್ ಕುಟುಂಬದವರಿಗೆ ದೇವರು ಇನ್ನಷ್ಟು ಸಹಾಯ ಮಾಡುವ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸಿದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಡಾ. ಬಸವರಾಜ ಧಾರವಾಡ ಮಾತನಾಡಿ, 'ಬಿಟ್ಟು ಹೋಗುವುದಕ್ಕಿಂತ ಕೊಟ್ಟು ಹೋಗುವುದು ಲೇಸು' ಎಂಬಂತೆ, ಸುನೀಲ್ ವರ್ಣೇಕರ್ ತಮ್ಮ ತಂದೆಯ ನೆನಪಿಗಾಗಿ ಇಂತಹ ಪುಣ್ಯದ ಕೆಲಸಕ್ಕೆ ಸಹಾಯ ಮಾಡಿದ್ದು ಇತರರಿಗೆ ಮಾದರಿಯಾಗಿದೆ. ಬಸವರಾಜ್ ಹೊರಟ್ಟಿ ದಂಪತಿಗಳ ಸಹಾಯದಿಂದ ಈ ಶಾಲೆ ದಿನದಿಂದ ದಿನಕ್ಕೆ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಬುರಡಿ, ದಾನಿಗಳಾದ ಸುನೀಲ್ ವರ್ಣೇಕರ್ ಕುಟುಂಬದವರು, ಪ್ರಭಾರಿ ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ್, ಜಯಲಕ್ಷ್ಮೀ ಅಣ್ಣಿಗೇರಿ, ಎಸ್. ಆರ್. ಹನುಮಗೌಡ್ರು, ಎಸ್.ಜಿ. ಕೊಲಗುಡಿ, ಎಂ.ಪಿ ಸಾಮ್ರಾಣಿ, ಎಸ್.ಎಂ. ಪತ್ತಾರ್, ಎಸ್. ಎಸ್. ಗಾಳಿ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ, ಎಂ.ಐ. ಶಿವನಗೌಡರ್, ನಾಗಪ್ಪ ಶಿರೋಳ, ರಮೇಶ್ ಬಸರಿ, ಶ್ರೀಮತಿ ದಾಸರ, ಎಲ್.ಎಸ್. ಮಾಳೋತ್ತರ್ ಮುಂತಾದವರು ಉಪಸ್ಥಿತರಿದ್ದರು.

# 'ಮಕ್ಕಳ ಸಂತೆ'ಯಿಂದ ವ್ಯವಹಾರ ಜ್ಞಾನ ವೃದ್ಧಿ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಕ್ಕಳಿಗೆ ಸಾಮಾನ್ಯ ವ್ಯವಹಾರದ ಜ್ಞಾನ, ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಆತ್ಮಸ್ಥೈರ್ಯ ವೃದ್ಧಿಗೆ ಈ ಮಕ್ಕಳ ಸಂತೆ, ಮೆಟ್ರಿಕ್ ಮೇಳ ಸಹಕಾರಿಯಾಗಲಿದೆ ಎಂದು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಎಂ.ಎಂ. ಹವಳದ ಹೇಳಿದರು.

ಅವರು ಸಮೀಪದ ಅಡರಕಟ್ಟಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ 2023-24ರ 'ಮಕ್ಕಳ ಸಂತೆ'-ಮೆಟ್ರಿಕ್ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇದು ನಮ್ಮ ಪತ್ಯಕ್ಕೆ ಹತ್ತಿರವಾಗಿದೆ, ಸುಲಭವಾಗಿ ಅರ್ಥವಾಗುತ್ತದೆ. ಶಾಲೆಯಲ್ಲಿ ಕಲಿಯುವ ಗಣಿತದೊಂದಿಗೆ ಮಕ್ಕಳಿಗೆ ಬದುಕು ನಡೆಸಲು ಅಗತ್ಯವಾದ ವ್ಯವಹಾರಿಕ ಗಣಿತ ತಿಳಿಯಲು ಮೆಟ್ರಿಕ್ ಮೇಳಗಳು ಸಹಕಾರಿಯಾಗಿವೆ. ದಿನನಿತ್ಯದ ವ್ಯಾಪಾರ-ವಹಿವಾಟಿನಲ್ಲಿ ತೊಡಗಿಸಿಕೊಳ್ಳುವ ಮಕ್ಕಳಲ್ಲಿ ವ್ಯಾಪಾರದ ಮನೋಭಾವನೆ ಹೆಚ್ಚುತ್ತದೆ. ಇಲ್ಲಿನ ಮಕ್ಕಳು ವ್ಯಾಪಾರ ಮಾಡುವ ರೀತಿ, ಯಾವುದೇ ವ್ಯಾಪಾರಿಗಳಿಗೂ ಕಡಿಮೆ ಇಲ್ಲದಂತೆ ನಿರ್ವಹಿಸುತ್ತಿರುವದು ಮೆಚ್ಚುಗೆಯನ್ನುಂಟುಮಾಡಿತು ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷೆ ಭಂಗಿಯವರ ಮಾತನಾಡಿ, ಇಂದಿನ ಮಕ್ಕಳು ಎಲ್ಲ ರೀತಿಯ ಜ್ಞಾನವನ್ನು ಪಡೆದವರಾಗಿರುತ್ತಾರೆ. ವ್ಯಾಪಾರದ ವಾತಾವರಣವನ್ನು ಸಹ ಮಕ್ಕಳು ಅರಿತುಕೊಂಡಲ್ಲಿ ಮುಂದಿನ ದಿನಗಳಲ್ಲಿ ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಮಕ್ಕಳ ಜ್ಞಾನ ಸಮಾಜದಲ್ಲಿ ಅನ್ವಯಗೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯೆ ಎಸ್.ಎಚ್. ಉಮಚಗಿ, ಕುಮಾರಣ್ಣ ಚಕ್ರಸಾಲಿ, ಎಸ್‌ಡಿಎಂಸಿಯ ರೇಣುಕಾ ರೊಳ್ಳಿ, ಗುರುನಾಥ ಮರಾಠಿ, ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಡಿ.ಡಿ. ಲಮಾಣಿ ನಿರೂಪಿಸಿದರು.

### ವೀರಶೈವ ಲಿಂಗಾಯತ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ಪ್ರತಿಭಾ ಪುರಸ್ಕಾರ

# ಬಸವಣ್ಣನವರ ವಚನ ಸಾಹಿತ್ಯ ಅನುಷ್ಠಾನವಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಬಸವಣ್ಣನವರ ವಚನ ಸಾಹಿತ್ಯವನ್ನು ನಾವು ಭಾಷಣದ ವಸ್ತುವಾಗಿ ಮಾಡಿಕೊಂಡು ಬಂದಿದ್ದೇವೆಯೇ ವಿನಃ ಕಾರ್ಯರೂಪಕ್ಕೆ ತರುವಲ್ಲಿ ಹಿಂದೆ ಉಳಿದಿದ್ದೇವೆ. ಕಾಯಕ ಮತ್ತು ದಾಸೋಹಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಅವರು ಇತ್ತೀಚೆಗೆ ನಗರದ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗದಗ ಜಿಲ್ಲಾ ಘಟಕ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತದ ಇತಿಹಾಸದಲ್ಲಿ 12ನೇ ಶತಮಾನ ಅತ್ಯಂತ ಮಹತ್ವಪೂರ್ಣವಾದುದು. ಅಜ್ಞಾನ, ಜಾತೀಯತೆ, ಮತಾಂಧತೆ, ಶೋಷಣೆ, ಮೌಢ್ಯಗಳಿಂದ ಮುಳುಗಿಹೋಗಿದ್ದ ಸಮಾಜವನ್ನು ಮೇಲೆತ್ತಲು ಅರಸ ಬಿಜ್ಜಳನಿಗೆ ಹಣಕಾಸು ಸಚಿವರಾಗಿದ್ದ ಬಸವಣ್ಣನವರು, ರಾಜಿ ಇಲ್ಲದ ಬದ್ಧತೆ, ಪ್ರಶ್ನಾತೀತವಾದ ಜನಪರ ಕಾಳಜಿ ಮೂಲಕ ಮಾಡಿದ ಪ್ರಯುತ್ನ-ಪ್ರಯೋಗಗಳು ಇತಿಹಾಸದ ಪುಟ ಸೇರಿವೆ ಎಂದರು.



ನಾವಿಂದು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಿದೆ. ಪಾಲಕ-ಪೋಷಕರು ತಮ್ಮ ಮಕ್ಕಳಿಗೆ ಆಸ್ತಿಯನ್ನು ಮಾಡದೇ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು. ಮಹಾಸಭಾ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದ್ದು ಶ್ಲಾಘನೀಯ.

– ಎಚ್.ಕೆ. ಪಾಟೀಲ.
ಜಿಲ್ಲಾ ಉಸ್ತುವಾರಿ ಸಚಿವರು.

ಸಾಮಾಜಿಕ ನ್ಯಾಯದ ಮೊದಲ ಹರಿಕಾರ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡುವ ಮೂಲಕ ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಆದೇಶಿಸಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗದಗ ಜಿಲ್ಲಾ ಘಟಕ ಸರಕಾರವನ್ನು ಅಭಿನಂದಿಸಿದ ಠರಾವಿನ ಅಭಿನಂದನಾ ಪತ್ರವನ್ನು ಮುಖ್ಯಮಂತ್ರಿ ಅವರಿಗೆ ತಲುಪಿಸುವದಾಗಿ ಹೇಳಿದರು.

ಮಹಾಸಭಾದ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಮಾಜಿ ಸಚಿವ ಎಸ್.ಎಸ್. ಪಾಟೀಲ, ಇಂದು ಬಸವ ತತ್ವವೇ ಸತ್ತು ಹೋಗಿದೆ. ಹೇಳುವದು ಒಂದು ಮಾಡುವದು ಇನ್ನೊಂದು ಎಂಬಂತಾಗಿದೆ. ಮಾತಿಗೂ ಕೃತಿಗೂ ವ್ಯತ್ಯಾಸವಿದೆ. ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆಯುಳ್ಳವರ ಸಂಖ್ಯೆ ಕಡಿಮೆ ಆಗುತ್ತಿದೆ. ಬಸವಣ್ಣನವರ ಅನುಯಾಯಿಗಳು, ಪರಿಪಾಲಕರು ಕಡಿಮೆಯಾಗುತ್ತಿದ್ದಾರೆ. ಯುವ ಜನಾಂಗಕ್ಕೆ ಬಸವತತ್ವ, ಕಾಯಕ, ದಾಸೋಹವನ್ನು ರೂಢಿಸಬೇಕಿದೆ ಎಂದರು.

ಬಸವಣ್ಣ ಕೇವಲ ಕರ್ನಾಟಕದ ಸಾಂಸ್ಕೃತಿಕ ನಾಯಕರಲ್ಲ. ಅವರು ವಿಶ್ವದ ನಾಯಕ. ಬಸವಣ್ಣ ಇಂದು ಬದುಕಿದ್ದರೆ ವಿಶ್ವಕ್ಕೆ ಮಾರ್ಗದರ್ಶಕ ಆಗಿರುತ್ತಿದ್ದರು ಎಂದು ಮಹಾತ್ಮಾ ಗಾಂಧಿ ಹೇಳಿದ್ದು ಸ್ಮರಣೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾಸಭಾದ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಕೊರ್ಲಹಳ್ಳಿ ಮಾತನಾಡಿ, ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದಕ್ಕೆ ಹಾಗೂ ಸಚಿವ ಎಚ್.ಕೆ. ಪಾಟೀಲರು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡಿದ್ದಕ್ಕೆ ಅಭಿನಂದಿಸಿದರು.

ಸುರೇಖಾ ಪಿಳ್ಳೆ ಪ್ರಾರ್ಥಿಸಿದರು. ಮುರುಘರಾಜೇಂದ್ರ ಬಡ್ನಿ ಸ್ವಾಗತಿಸಿದರು. ಬಿ.ಬಿ. ಅಸೂಟಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಎಂ.ಎಸ್. ಮಲ್ಲಾಪೂರ ಅಭಿನಂದನಾ ಪತ್ರ ವಾಚಿಸಿದರು.

ವೇದಿಕೆಯ ಮೇಲೆ ಎಸ್.ಬಿ. ಕರಿಭರಮಗೌಡ್ರ, ಚನ್ನಯ್ಯ ಸಂಗಳಮಠ, ಪಿ.ಟಿ. ನಾರಾಯಣಪೂರ, ಮಂಜುಳಾ ರೇವಡಿ, ಕಾರ್ಯಕಾರಿ ಮಂಡಳಿ ಸದಸ್ಯರು ಹಾಗೂ ತಾಲೂಕಾ ಘಟಕಗಳ ಅಧ್ಯಕ್ಷರಾದ ಸಿದ್ದು ಪಲ್ಲೇದ, ರಾಜಣ್ಣ ಹೂಲಿ, ಶಂಕ್ರಪ್ಪ ಕುಕನೂರ, ಯಲ್ಲಪ್ಪಗೌಡ ನಾಯ್ಕರ ಉಪಸ್ಥಿತರಿದ್ದರು.

# ಜನರಿಕ್ ಕೇಂದ್ರ ತೆರೆಯಲು ಫಾರ್ಮಸಿ ಪದವೀಧರರಿಗೆ ಅವಕಾಶ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಹೋಬಳಿ ಮಟ್ಟದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಕಡಿಮೆ ಹಾಗೂ ನ್ಯಾಯಯುತ ಬೆಲೆಯಲ್ಲಿ ಜನರಿಕ್ ಔಷಧಿಗಳನ್ನು ಒದಗಿಸಲು ಪ್ರದಾನಮಂತ್ರಿ ಜನೌಷಧಿ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದ್ದು, ಇದಕ್ಕಾಗಿ ಫಾರ್ಮಸಿ ಪದವೀಧರರ ಸೇವೆ ಅವಶ್ಯವಿದ್ದು ಆಸಕ್ತರು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ 125 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಗದಗ ಉಪವಿಭಾಗ, ಗದಗ ಎಪಿಎಂಸಿ ಯಾರ್ಡ್ ಈ ಕಚೇರಿಗಳಿಗೆ ಅಥವಾ ಸಹಕಾರ ಅಭಿವೃದ್ಧಿ ಅಧಿಕಾರಿ ಮುಂಡರಗಿ -8088386791, ಸಹಕಾರ ಅಭಿವೃದ್ಧಿ ಅಧಿಕಾರಿ ನರಗುಂದ- 8660099227, ಸಹಕಾರ ಅಭಿವೃದ್ಧಿ ಅಧಿಕಾರಿ ಲಕ್ಷ್ಮೇಶ್ವರ-9739247088, ಸಹಕಾರ ಸಂಘಗಳ ನಿರೀಕ್ಷಕರು ಗದಗ-9945187724 ಇವರನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka